**2026 ರ ಕರ್ನಾಟಕ ಅಧಿನಿಯಮ ಸಂಖ್ಯೆ: 26**

# ಕರ್ನಾಟಕ ವಿವಾಹದಲ್ಲಿ ಆಯ್ಕೆಯ ಸ್ವಾತಂತ್ರ್ಯ ಹಾಗೂ ಮರ್ಯಾದೆ ಮತ್ತು ಸಂಪ್ರದಾಯದ ಹೆಸರಿನಲ್ಲಿನ ಅಪರಾಧಗಳ ಪ್ರತಿಬಂಧಕ ಮತ್ತು ನಿಷೇಧ (ಇವ ನಮ್ಮವ ಇವ ನಮ್ಮವ) ಅಧಿನಿಯಮ, 2026

## ಪ್ರಕರಣಗಳ ಪಟ್ಟಿ

ಪ್ರಕರಣಗಳು


**1.** ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ

**2.** ಪರಿಭಾಷೆಗಳು

**3.** ವಿವಾಹವಾಗುವ ಸ್ವಾತಂತ್ರ್ಯ

**4.** ಅಂತರ್ಜಾತಿ ವಿವಾಹವಾಗಲು ಉದ್ದೇಶಿಸಿದ ಜೋಡಿಗಳಿಂದ ಘೋಷಣೆ

**5.** ಮರ್ಯಾದೆ ಅಥವಾ ಸಂಪ್ರದಾಯದ ಹೆಸರಿನಲ್ಲಿನ ಅಪರಾಧಗಳ ನಿಷೇಧ

**6.** ಕಾನೂನುಬಾಹಿರ ಸಭೆ ಸೇರುವಿಕೆಯ ಪ್ರತಿಬಂಧ

**7.** ನಿರ್ಬಂಧಕಾಜ್ಞೆಗಳನ್ನು ಹೊರಡಿಸುವ ನ್ಯಾಯಾಲಯದ ಅಧಿಕಾರ

**8.** 'ಮರ್ಯಾದೆ'ಯ ಹೆಸರಿನಲ್ಲಿ ಹತ್ಯೆ

**9.** ತೀವ್ರ ಗಾಯ ಅಥವಾ ಹಾನಿ

**10.** ಮರ್ಯಾದೆ ಅಥವಾ ಸಂಪ್ರದಾಯದ ಹೆಸರಿನಲ್ಲಿನ ಅಪರಾಧಗಳು ಮತ್ತು 3ನೇ ಪ್ರಕರಣದಡಿಯ ಹಕ್ಕುಗಳ ಚಲಾವಣೆಯನ್ನು ತಡೆಯುವ ಯಾವುದೇ ಇತರ ಕೃತ್ಯ

**11.** ಅಪರಾಧಿಕ ಬೆದರಿಸುವಿಕೆ

**12.** ಕಾನೂನುಬಾಹಿರ ಸಭೆಸೇರುವಿಕೆ

13. ಸಾಕ್ಷ್ಯವನ್ನು ತಿರುಚುವುದು

**14.** ದುಷ್ಪ್ರೇರಣೆ, ಪ್ರಯತ್ನ ಅಥವಾ ಪಿತೂರಿಗಾಗಿ ದಂಡನೆ

**15.** ಅಪರಾಧಗಳು ಸಂಜ್ಞೇಯ ಮತ್ತು ಜಾಮೀನು-ರಹಿತವಾಗಿರುವುದು

**16.** ಪ್ರಕರಣ 3ರಡಿ ಅವರ ಹಕ್ಕುಗಳನ್ನು ಚಲಾಯಿಸುವ ವ್ಯಕ್ತಿಗಳ ಹಕ್ಕುಗಳು ಹಾಗೂ ಈ ಅಧಿನಿಯಮದಡಿಯ ಯಾವುದೇ ಅಪರಾಧದ ಸಂತ್ರಸ್ತರು

**17.** ರಕ್ಷಣೆ ಮತ್ತು ಸುರಕ್ಷಿತ ವಾಸಸ್ಥಳಗಳನ್ನು ಒದಗಿಸುವ ಕರ್ತವ್ಯ

**18.** ಸಾರ್ವಜನಿಕ ನೌಕರನ ಕರ್ತವ್ಯ

**19. ಕೆಲವು ಕೃತ್ಯಗಳನ್ನು ನಿಷೇಧಿಸುವ ಮತ್ತು ಪ್ರತಿಬಂಧಕ ಕ್ರಮಗಳನ್ನು ತೆಗೆದುಕೊಳ್ಳುವ ಅಧಿಕಾರ**

**20. ಅಧಿನಿಯಮದಡಿ ಕರ್ತವ್ಯವನ್ನು ನಿರ್ವಹಿಸಲು ವಿಫಲವಾಗುವಿಕೆ**

**21. ಕಡ್ಡಾಯವಾಗಿ ವರದಿ ಮಾಡುವುದು**

**22. ಅಧಿನಿಯಮದ ಪರಿಣಾಮಕಾರಿ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳುವ ರಾಜ್ಯ ಸರ್ಕಾರದ ಕರ್ತವ್ಯಗಳು**

**23. ಮೇಲ್ವಿಚಾರಣಾ ಸಮಿತಿಗಳ ರಚನೆ**

**24. ಇವ ನಮ್ಮವ ವೇದಿಕೆ**

**25. ವಿಶೇಷ ತ್ವರಿತ ನ್ಯಾಯಾಲಯಗಳ ಸ್ಥಾಪನೆ**

**26. ಅಪೀಲುಗಳು**

**27. ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023ರ ಅನ್ವಯ**

**28. ಅಧಿನಿಯಮವು ಇತರ ಕಾನೂನುಗಳಿಗೆ ಹೆಚ್ಚುವರಿಯಾಗಿರತಕ್ಕದ್ದು**

**29. ನಿಯಮಗಳ ರಚನಾಧಿಕಾರ**


## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**2026ರ ತಿದ್ದುಪಡಿ ಅಧಿನಿಯಮ ಸಂಖ್ಯೆ: 26** ಕರ್ನಾಟಕ ರಾಜ್ಯದಲ್ಲಿ ಜಾತಿ-ಆಧಾರಿತ ತಾರತಮ್ಯವು ನಿರಂತರವಾಗಿ, ಅಂತರ್ಜಾತಿ ವಿವಾಹಗಳ ಮೂಲಕ ಅವರ ಜೀವನ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳುವ ತಮ್ಮ ಸಾಂವಿಧಾನಿಕ ಹಕ್ಕನ್ನು ಚಲಾಯಿಸುವವರ, ವಿಶೇಷವಾಗಿ ಯುವ ವಯಸ್ಕರ ವಿರುದ್ಧ, ಮರ್ಯಾದೆಗೇಡು ಹತ್ಯೆಗಳನ್ನು ಒಳಗೊಂಡಂತೆ ಕ್ರೂರ ಸ್ವರೂಪದ ಹಿಂಸಾಚಾರಗಳು ವ್ಯಕ್ತವಾಗುತ್ತಿರುವುದು ಮುಂದುವರಿಯುತ್ತಿರುವುದರಿಂದ.

ಮತ್ತು ಕೊಲೆ, ಹಲ್ಲೆ ಮತ್ತು ಅಪರಾಧಿಕ ಬೆದರಿಸುವಿಕೆಯಂತಹ ಅಪರಾಧಗಳು ಭಾರತೀಯ ನ್ಯಾಯ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 45)ರಡಿ ಶಿಕ್ಷಾರ್ಹವಾಗಿದ್ದರೂ, ಈ ಉಪಬಂಧಗಳು ಜೀವಂತ ಹೆಣ್ಣುಮಕ್ಕಳಿಗೆ ಮರಣದ ಆಚರಣೆಗಳನ್ನು (ತಿಥಿ) ಮಾಡುವುದರಿಂದ, ಕಾನೂನುಬದ್ಧ ಪಿತ್ರಾರ್ಜಿತ ಹಕ್ಕುಗಳನ್ನು ನಿರಾಕರಿಸುವುದರಿಂದ, ಸಾಮಾಜಿಕ ಬಹಿಷ್ಕಾರದಿಂದ, ವಿಷವುಣಿಸುವ ಮೂಲಕ ಅಥವಾ ಇತರ ನಿಗೂಢ ವಿಧಾನಗಳ ಮೂಲಕ ಹಾನಿಯನ್ನುಂಟು ಮಾಡುವ ಕಪಟ ಪ್ರಯತ್ನಗಳಿಂದ ಪರಿಗಣಿಸಲಾದ "ಜಾತಿ ಮರ್ಯಾದೆ" ಯನ್ನು ಸಂರಕ್ಷಿಸುವ ನಿರ್ದಿಷ್ಟ ಸಾಮಾಜಿಕ ಉದ್ದೇಶವನ್ನು ಅಥವಾ ವ್ಯಾಪಕ ಶ್ರೇಣಿಯ ದಬ್ಬಾಳಿಕೆಯ ಅಭ್ಯಾಸಗಳನ್ನು ಸಮರ್ಪಕವಾಗಿ ಪರಿಹರಿಸುತ್ತಿಲ್ಲವಾದ್ದರಿಂದ. ಅಂಥ ಕೃತ್ಯಗಳು ಭಾರತ ಸಂವಿಧಾನದ 14, 15, 19

ಮತ್ತು 21ನೇ ಅನುಚ್ಛೇದಗಳಡಿಯಲ್ಲಿ ಖಾತರಿಪಡಿಸಲಾದ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸುವುದಲ್ಲದೆ, ಜಾತೀಯ ಶ್ರೇಣೀಕರಣ ವ್ಯವಸ್ಥೆಯನ್ನು ನಿರ್ಮೂಲನೆ ಮಾಡುವ ಸಾಧನವಾಗಿ ಅಂತರ್ಜಾತಿ ವಿವಾಹಗಳನ್ನು ಪ್ರತಿಪಾದಿಸಿದ ಶ್ರೀ ಬಸವಣ್ಣ ಮತ್ತು ಡಾ. ಬಿ. ಆರ್. ಅಂಬೇಡ್ಕರ್ ಅವರಂತಹ ಸಮಾಜ ಸುಧಾರಕ ಯುಗಪ್ರವರ್ತಕರ ದೃಷ್ಟಿಕೋನವನ್ನು ದುರ್ಬಲಗೊಳಿಸುತ್ತವೆ.

ಹಾಗೂ ಇದರಿಂದಾಗಿ, ಈಗಾಗಲೇ ಇರುವ ಕಾನೂನುಗಳು, ಅಪಾಯದಲ್ಲಿರುವ ದಂಪತಿಗಳ ರಕ್ಷಣೆಗಾಗಿ ಪೂರ್ವಭಾವಿ ಕಾರ್ಯವ್ಯವಸ್ಥೆಗಳು, ಕಡ್ಡಾಯ ಪೊಲೀಸ್ ಹಸ್ತಕ್ಷೇಪ, ತ್ವರಿತಗತಿಯ ನ್ಯಾಯಿಕ ತೀರ್ಪು ಮತ್ತು ಅನುವಂಶಿಕವಾದ ಅಂಥ ನಾಗರಿಕ ಹಕ್ಕುಗಳ ಮರುಸ್ಥಾಪನೆಯಲ್ಲಿ ಕೆಲವು ನ್ಯೂನ್ಯತೆಗಳನ್ನು ಹೊಂದಿರುತ್ತವೆ. ಇದಕ್ಕೆಂದೇ ಮೀಸಲಾದ ಶಾಸನವು ಇಲ್ಲವಾದ್ದರಿಂದ, ದುಷ್ಕೃತ್ಯವನ್ನು ಎಸಗಿದವರು ಆಗಾಗ್ಗೆ ಕಠಿಣ ಶಿಕ್ಷೆಯಿಂದ ತಪ್ಪಿಸಿಕೊಳ್ಳುತ್ತಿರುವುದರಿಂದ ಮತ್ತು ಸಂತ್ರಸ್ತರು ಅಥವಾ ಬದುಕುಳಿದವರು ಅಸಮರ್ಪಕವಾದ ಪರಿಹಾರ ಹಾಗೂ ಪುನರ್ವಸತಿಯನ್ನು ಪಡೆಯುತ್ತಿರುವುದರಿಂದ.

ಮತ್ತು ಭಾರತದ ಸಂವಿಧಾನವು ವ್ಯಕ್ತಿಯ ಘನತೆ ಮತ್ತು ರಾಷ್ಟ್ರದ ಏಕತೆ ಹಾಗೂ ಸಮಗ್ರತೆಯನ್ನು ಸುಭದ್ರಗೊಳಿಸುವ ಭ್ರಾತೃತ್ವದ ತತ್ವವನ್ನು ಪ್ರತಿಪಾದಿಸುತ್ತದೆ ಹಾಗೂ ಈ ತತ್ವವು ಜಾತಿ ಆಧಾರಿತ ತಾರತಮ್ಯವನ್ನು ನಿರ್ಮೂಲನೆ ಮಾಡಲು ಮತ್ತು ಅಂತರ್ಜಾತಿ ವಿವಾಹಗಳ ಮನ್ನಣೆ ಮತ್ತು ರಕ್ಷಣೆಯ ಮೂಲಕ ಸಾಮಾಜಿಕ ಒಗ್ಗಟ್ಟನ್ನು ಉತ್ತೇಜಿಸಲು ಒತ್ತಾಯಿಸುತ್ತದೆ.

ಆದ್ದರಿಂದ,-

(i) ವಿವಾಹದಲ್ಲಿ ಆಯ್ಕೆಯ ಸ್ವಾತಂತ್ರ್ಯವನ್ನು ಉಪಬಂಧಿಸಲು ಮತ್ತು ಜಾತಿ ಆಧಾರಿತ ಅಪರಾಧಗಳನ್ನು ಪ್ರತಿಬಂಧಿಸಲು ಮತ್ತು ನಿಷೇಧಿಸಲು;

(ii) ಮಾನವ ಹಕ್ಕುಗಳ ಉಲ್ಲಂಘನೆಯನ್ನು ತಡೆಯಲು;

(iii) ಅಂತರ್ಜಾತಿ ವಿವಾಹಕ್ಕೆ ಗೌರವವನ್ನು ನೀಡಲು;

(iv) ವೈಯಕ್ತಿಕ ಆಯ್ಕೆಗಳಲ್ಲಿ ಬಲವಂತದ ಜಾತಿ ಆಧಾರಿತ ತಾರತಮ್ಯವನ್ನು ಪ್ರತಿಬಂಧಿಸಲು; ಮತ್ತು

(v) ಅಂತರ್ಜಾತಿಯ ವಿವಾಹಗಳನ್ನು ವಿಧಿವತ್ತಾಗಿ ನೆರವೇರಿಸುವುದಕ್ಕೆ 'ಇವ ನಮ್ಮವ ಇವ ನಮ್ಮವ ವೇದಿಕೆ' ಯನ್ನು ರಚಿಸಲು,

- ಶಾಸನವನ್ನು ರಚಿಸುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2026ರ ವಿಧಾನ ಸಭೆಯ ವಿಧೇಯಕ ಸಂಖ್ಯೆ: 07, ಕಡತ ಸಂಖ್ಯೆ:ಸಂವ್ಯಶಾಇ 09 ಶಾಸನ 2026]
[ಭಾರತ ಸಂವಿಧಾನದ ಅನುಚ್ಛೇಧ 21 ಹಾಗೂ 7ನೇ ಅನುಸೂಚಿಯ 3ನೇ ಪಟ್ಟಿಯ 5, 20 ಮತ್ತು 23ನೇ ನಮೂದನೆಗಳಡಿ ಬರುತ್ತದೆ.]
[ಕರ್ನಾಟಕ ರಾಜ್ಯ ಪತ್ರದ ಭಾಗ IVಎ ವಿಶೇಷ ರಾಜ್ಯ ಪತ್ರಿಕೆ ಸಂಖ್ಯೆ:274, ದಿನಾಂಕ:10.04.2026ರಲ್ಲಿ ಪ್ರಕಟಗೊಂಡಿದೆ]

## 2026 ರ ಕರ್ನಾಟಕ ಅಧಿನಿಯಮ ಸಂಖ್ಯೆ: 26

(2026ರ ಏಪ್ರಿಲ್ ತಿಂಗಳ 10ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

# ಕರ್ನಾಟಕ ವಿವಾಹದಲ್ಲಿ ಆಯ್ಕೆಯ ಸ್ವಾತಂತ್ರ್ಯ ಹಾಗೂ ಮರ್ಯಾದೆ ಮತ್ತು ಸಂಪ್ರದಾಯದ ಹೆಸರಿನಲ್ಲಿನ ಅಪರಾಧಗಳ ಪ್ರತಿಬಂಧಕ ಮತ್ತು ನಿಷೇಧ (ಇವ ನಮ್ಮವ ಇವ ನಮ್ಮವ) ಅಧಿನಿಯಮ, 2026

(2026ರ ಏಪ್ರಿಲ್ ತಿಂಗಳ 09ನೇ ದಿನಾಂಕದಂದು ರಾಜ್ಯ ಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಭಾರತ ಸಂವಿಧಾನವು ಎಲ್ಲಾ ವ್ಯಕ್ತಿಗಳಿಗೆ, ಕಾನೂನಿನ ಮುಂದೆ ಸಮಾನತೆ ಮತ್ತು ಕಾನೂನುಗಳ ಸಮಾನ ರಕ್ಷಣೆಯ ಹಕ್ಕು (ಅನುಚ್ಛೇದ 14), ಜೀವನದ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಹಕ್ಕು (ಅನುಚ್ಛೇದ 21), ಹಾಗೂ ಅಭಿವ್ಯಕ್ತಿ, ಸಹಚರ್ಯ ಮತ್ತು ಸರ್ವತ್ರಸಂಚಾರಗಳ ಸ್ವಾತಂತ್ರ್ಯಗಳಿಗಾಗಿ (ಅನುಚ್ಛೇದ 19) ಮೂಲಭೂತ ಹಕ್ಕುಗಳನ್ನು ಖಾತರಿಪಡಿಸಿರುವುದರಿಂದ;

ಮತ್ತು ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 1993ರಲ್ಲಿ ಪ್ರತಿಪಾದಿಸಲಾದ ಜೀವನ, ಸ್ವಾತಂತ್ರ್ಯ, ಸಮಾನತೆ ಮತ್ತು ಘನತೆಯ ಆದ್ಯಮೂಲ (primordial) ಮಾನವ ಹಕ್ಕುಗಳು, ವ್ಯಕ್ತಿಗಳಿಗೆ ಅವರ ನಿರ್ಣಯಾತ್ಮಕ ಸ್ವಾತಂತ್ರ್ಯವನ್ನು ಚಲಾಯಿಸಲು ಲಭ್ಯವಾಗಬೇಕಾದುದರಿಂದ;

ಹಾಗೂ ಪ್ರತಿಯೊಬ್ಬ ವ್ಯಕ್ತಿಗೂ ಅವರ ಸಂಗಾತಿಗಳನ್ನು ಆಯ್ಕೆಮಾಡುವ, ವಿವಾಹವಾಗುವ ಮತ್ತು ಘನತೆಯ ಬದುಕನ್ನು ನಡೆಸುವ ಸ್ವಾಯತ್ತತೆಯು ಈ ಹಕ್ಕುಗಳಲ್ಲಿ ಅಡಕವಾಗಿರುವುದರಿಂದ;

ಮತ್ತು ಸಂವಿಧಾನವು ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಅಡಗಿರುವ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಯನ್ನು ಮಾನ್ಯಮಾಡಿ, ವ್ಯಕ್ತಿತ್ವ ಮತ್ತು ಅಸ್ಮಿತೆಯನ್ನು ನಿರ್ಧರಿಸುವ ಅಂಶಗಳ ಕುರಿತು ನಿರ್ಣಯ ತೆಗೆದುಕೊಳ್ಳುವ ಸಾಮರ್ಥ್ಯವನ್ನೂ ಒಳಗೊಂಡಿದ್ದು, ಇದರಲ್ಲಿ ಮದುವೆಯಲ್ಲಿನ ಸಂಗಾತಿಯ ಆಯ್ಕೆಯೂ ಒಳಗೊಂಡಿರುವುದರಿಂದ;

ಹಾಗೂ ಜಾತಿ ಶ್ರೇಣೀಕರಣ, ಮರ್ಯಾದೆ, ಸಂಪ್ರದಾಯಗಳ ಹೆಸರಿನಲ್ಲಿ-ವ್ಯಕ್ತಿಗಳ ವಿರುದ್ಧ, ವಿಶೇಷವಾಗಿ ಅವರ ವಿವಾಹದ ಹಕ್ಕನ್ನು ಚಲಾಯಿಸುವ ಯುವ ಜೋಡಿಗಳ ವಿರುದ್ಧ- ಪದೇಪದೇ ಹಿಂಸೆ, ಕಿರುಕುಳ, ಬೆದರಿಕೆ ಮತ್ತು ಸಾಮಾಜಿಕ ಬಹಿಷ್ಕಾರಗಳ ದುರಾಚಾರವೆಸಗುವಿಕೆಯು ಆತಂಕಕಾರಿಯಾಗಿ ಏರಿಕೆಯಾಗುತ್ತಿರುವುದರಿಂದ;

ಮತ್ತು ಅಂಥ ಹಿಂಸೆಯು ಹೆಚ್ಚಾಗಿ ಅವರ ಆಯ್ಕೆಗಳ ಮೇಲೆ ಪಿತೃಪ್ರಧಾನ (patriarchal) ನಿಯಂತ್ರಣಕ್ಕೆ ಒಳಗಾಗಿರುವ ಮಹಿಳೆಯರನ್ನು ಬಾಧಿಸುತ್ತಿದ್ದು, ಹಾಗೆಯೇ ದುರ್ಬಲ ಸಮುದಾಯಗಳ ಪುರುಷರು ಜಾತಿ ಎಲ್ಲೆಗಳನ್ನು ಮೀರಿ ಸಂಬಂಧಗಳನ್ನು ಸಾಧಿಸಿರುವ ಕಾರಣಕ್ಕಾಗಿ ಗುರಿಯಾಗುತ್ತಿರುವುದರಿಂದ;

ಹಾಗೂ ಸ್ವಜಾತಿ ವಿವಾಹ ಪದ್ಧತಿಯು (endogamy) ಜಾತಿ ಪದ್ಧತಿಯನ್ನು ಉಳಿಸುವ ಒಂದು ರಚನಾತ್ಮಕ ವ್ಯವಸ್ಥೆಯಾಗಿ ರೂಪುಗೊಂಡಿದ್ದು, ಅಂತರ್ಜಾತಿ ವಿವಾಹಗಳು ಅದರ

ಕಠಿಣ ಮತ್ತು ದಮನಕಾರಿ ಚೌಕಟ್ಟನ್ನು ಭೇದಿಸಲು ಹಾಗೂ ಸಂವಿಧಾನಾತ್ಮಕ ಭ್ರಾತೃತ್ವ ತತ್ವದೆಡೆಗೆ ಮುಂದುವರೆಯಲು ಅಗತ್ಯ ಸಾಧನಗಳಾಗಿ ಪರಿಣಮಿಸಿರುವುದರಿಂದ;

ಮತ್ತು ಭಾರತ ಸಂವಿಧಾನವು ವ್ಯಕ್ತಿಯ ಘನತೆ ಹಾಗೂ ರಾಷ್ಟ್ರದ ಏಕತೆ ಮತ್ತು ಅಖಂಡತೆಯನ್ನು ಭದ್ರಗೊಳಿಸಲು ಭ್ರಾತೃತ್ವ ತತ್ವವನ್ನು ಅಗತ್ಯವೆಂದು ಪ್ರತಿಪಾದಿಸಿದ್ದು, ಈ ತತ್ವವು ಅಂತರ್ಜಾತಿ ವಿವಾಹಗಳನ್ನು ಮಾನ್ಯಮಾಡುವ ಹಾಗೂ ರಕ್ಷಿಸುವ ಮೂಲಕ ಜಾತಿ ಆಧಾರಿತ ತಾರತಮ್ಯದ ನಿರ್ಮೂಲನೆ ಮತ್ತು ಸಾಮಾಜಿಕ ಒಗ್ಗಟ್ಟಿನ ಉತ್ತೇಜನವನ್ನು ಒತ್ತಾಯಿಸುತ್ತಿರುವುದರಿಂದ;

ಮತ್ತು ಅಂತಹ ಕೃತ್ಯಗಳು ಸಾಂವಿಧಾನಿಕ ಹಕ್ಕುಗಳು ಮತ್ತು ಮಾನವ ಘನತೆಯನ್ನು ಗಂಭೀರವಾಗಿ ಉಲ್ಲಂಘಿಸುವಂತಿದ್ದು, ಇವುಗಳನ್ನು ಖಾಸಗಿ ಅಥವಾ ಕೌಟುಂಬಿಕ ವಿಷಯಗಳಾಗಿಯಲ್ಲದೆ, ಕಾನೂನಿನ ಹಸ್ತಕ್ಷೇಪ ಮತ್ತು ರಕ್ಷಣೆಗೆ ಅರ್ಹವಾದ ಗಂಭೀರ ಅಪರಾಧಗಳೆಂದು ಗುರುತಿಸಬೇಕಾಗಿರುವುದರಿಂದ;

ಹಾಗೂ ವೈಯಕ್ತಿಕ ಆಯ್ಕೆಗಳಲ್ಲಿ ಜಾತಿ ಆಧಾರಿತ ತಾರತಮ್ಯವನ್ನು ಹೇರುವುದರಿಂದ ವ್ಯಕ್ತಿಗಳು ಮತ್ತು ಗುಂಪುಗಳನ್ನು ತಡೆಯುವುದು ಅವಶ್ಯಕವಾಗಿರುವುದರಿಂದ;

ಮತ್ತು “ಇವ ನಮ್ಮವ, ಇವ ನಮ್ಮವ” ಎಂಬ ಸರ್ವಗ್ರಾಹಿ, ಕಾಲಾತೀತ ತತ್ವವನ್ನು ಪ್ರತಿಬಿಂಬಿಸುವ ಒಳಗೊಳ್ಳುವಿಕೆ, ಭ್ರಾತೃತ್ವವನ್ನು ಉತ್ತೇಜಿಸುವ ವಾತಾವರಣವನ್ನು ನಿರ್ಮಿಸುವುದು ಅಗತ್ಯವಾಗಿರುವುದರಿಂದ;

ಮತ್ತು ಅಂತಹ ಕೃತ್ಯಗಳು ಸಂಭವಿಸುವುದನ್ನು ತಡೆಯಲು ಹಾಗೂ ವ್ಯಕ್ತಿಗಳನ್ನು ರಕ್ಷಿಸುವುದಕ್ಕಾಗಿ ಪ್ರತಿಬಂಧಕ, ಪರಿಹಾರಾತ್ಮಕ ಮತ್ತು ಪುನರ್ವ್ಯವಸ್ಥೆಯ ಕಾರ್ಯತಂತ್ರಗಳನ್ನೊಳಗೊಂಡ ಸಮಗ್ರ ರಕ್ಷಣಾತ್ಮಕ ಕ್ರಮಗಳನ್ನು ಸ್ಥಾಪಿಸಲು ಮತ್ತು ಸರ್ಕಾರಿ ಅಧಿಕಾರಿಗಳು ಕಾನೂನಾತ್ಮಕ ಹೊಣೆಗಾರಿಕೆಯಡಿಯಲ್ಲಿ ಪರಿಣಾಮಕಾರಿಯಾಗಿ ಸ್ಪಂದಿಸುವುದನ್ನು ಖಚಿತಪಡಿಸಿಕೊಳ್ಳಲು ಹಾಗೂ ಘನತೆ, ಸ್ವಾತಂತ್ರ್ಯ ಮತ್ತು ಸಮಾನತೆಯ ಸಂವಿಧಾನಾತ್ಮಕ ಹಕ್ಕುಗಳನ್ನು ಎತ್ತಿಹಿಡಿಯಲು ಪೂರ್ವಭಾವಿ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯವಾಗಿರುವುದರಿಂದ.

ಆದ್ದರಿಂದ ಈಗ, “ಮರ್ಯಾದೆ” ಮತ್ತು ಸಂಪ್ರದಾಯದ ಹೆಸರಿನಲ್ಲಿ ಎಸಗುವ ಅಪರಾಧಗಳನ್ನು ತಡೆಯಲು, ವಿವಾಹದಲ್ಲಿನ ವೈಯಕ್ತಿಕ ಆಯ್ಕೆಯ ಸ್ವಾತಂತ್ರ್ಯದಲ್ಲಿ ಹಸ್ತಕ್ಷೇಪ ಮಾಡುವ ಯಾವುದೇ ವರ್ತನೆಯನ್ನು ಶಿಕ್ಷಿಸಲು ಹಾಗೂ ಪ್ರತಿಬಂಧಕ, ಪರಿಹಾರಾತ್ಮಕ ಮತ್ತು ಪುನರ್ವ್ಯವಸ್ಥೆಗಾಗಿ ಕಾನೂನು ರಕ್ಷಣೆಗಳು, ಪರಿಹಾರಗಳು ಮತ್ತು ಸಾಂಸ್ಥಿಕ ಕಾರ್ಯವ್ಯವಸ್ಥೆಗಳನ್ನು ಉಪಬಂಧಿಸಲು ಎಲ್ಲಾ ವ್ಯಕ್ತಿಗಳ ಸ್ವಾತಂತ್ರ್ಯ, ಘನತೆ ಮತ್ತು ಸ್ವಾಯತ್ತತೆಯನ್ನು ದೃಢೀಕರಿಸುವ ಮತ್ತು ರಕ್ಷಿಸುವ ಕಾನೂನನ್ನು ಅಧಿನಿಯಮಿತಿಗೊಳಿಸುವುದು ಯುಕ್ತವಾಗಿರುವುದರಿಂದ.

ಭಾರತ ಗಣರಾಜ್ಯದ ಎಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿಸಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ವಿವಾಹದಲ್ಲಿ ಆಯ್ಕೆಯ ಸ್ವಾತಂತ್ರ್ಯ ಹಾಗೂ ಮರ್ಯಾದೆ ಮತ್ತು ಸಂಪ್ರದಾಯದ ಹೆಸರಿನಲ್ಲಿನ ಅಪರಾಧಗಳ ಪ್ರತಿಬಂಧಕ ಮತ್ತು ನಿಷೇಧ (ಇವ ನಮ್ಮವ ಇವ ನಮ್ಮವ) ಅಧಿನಿಯಮ, 2026 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** (1) ಈ ಅಧಿನಿಯಮದಲ್ಲಿ ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಅಂತರ್ಜಾತಿ ವಿವಾಹ" ಎಂದರೆ ಎರಡು ವಿಭಿನ್ನ ಜಾತಿಗಳು ಅಥವಾ ಉಪಜಾತಿಗಳಿಗೆ ಸೇರಿದ ವ್ಯಕ್ತಿಗಳ ನಡುವಿನ ವಿವಾಹ;

(ಬಿ) "ಸಾಮಾಜಿಕ ಮತ್ತು ಆರ್ಥಿಕ ಬಹಿಷ್ಕಾರ" ಎಂಬುದು ಸಾಮಾಜಿಕ ಅಥವಾ ಆರ್ಥಿಕ ದಂಡನೆಗಳನ್ನು ಜಾರಿಗೊಳಿಸುವ ಅಥವಾ ಬಹಿಷ್ಕಾರಕ್ಕೆ ಕಾರಣವಾಗುವ ಎಲ್ಲಾ ಕೃತ್ಯಗಳನ್ನು ಒಳಗೊಂಡಿರುವುದು ಮತ್ತು ಈ ಮುಂದಿನವುಗಳನ್ನು ಒಳಗೊಳ್ಳುವುದು, ಎಂದರೆ:-

(i) ಸಂಬಂಧಪಟ್ಟ ಹಳ್ಳಿ ಅಥವಾ ವಾಸದ ಸ್ಥಳವನ್ನು ಬಿಡುವಂತೆ ವಿವಾಹಿತ ಜೋಡಿ ಅಥವಾ ಅವರ ಕುಟುಂಬದವರು ಅಥವಾ ಸಂಬಂಧಿಗಳಿಗೆ ಒತ್ತಡ ಹೇರುವುದು;

(ii) ಯಾವುದೇ ಸಂಪ್ರದಾಯಬದ್ಧ ಸೇವೆಯನ್ನು ಇತರ ವ್ಯಕ್ತಿಗೆ ನೀಡಲು ಅಥವಾ ಆತನಿಂದ ಸ್ವೀಕರಿಸಲು ಇರುವ ಅನುಮತಿಯನ್ನು ನಿರಾಕರಿಸುವುದು, ಅಥವಾ ಇತರ ವ್ಯಕ್ತಿಯೊಂದಿಗೆ ಪ್ರತಿಯೊಬ್ಬರು ನಿರ್ವಹಿಸಲಾಗುವ ಸಾಮಾಜಿಕ ಸಂಬಂಧಗಳಿಂದ ದೂರವಿರಿಸುವುದು ಅಥವಾ ಆತನನ್ನು ಇತರರಿಂದ ಪ್ರತ್ಯೇಕಿಸುವುದು;

(iii) ಮಾರುಕಟ್ಟೆಗಳು, ಸಮುದಾಯ ಸೌಲಭ್ಯಗಳು, ಪೂಜಾಸ್ಥಳಗಳು ಅಥವಾ ಬದುಕಿನ ಯಾವುದೇ ಇತರ ಅವಶ್ಯಕತೆಗಳ ಪ್ರವೇಶಕ್ಕೆ ತಡೆಯೊಡ್ಡುವ ಅಥವಾ ತಡೆಯೊಡ್ಡಲು ಸಾಧ್ಯವಿರುವ ಯಾವುದೇ ವರ್ತನೆಯಲ್ಲಿ ತೊಡಗುವುದು;

(iv) ವಿವಾಹಿತ ಜೋಡಿ ಅಥವಾ ಅವರ ಕುಟುಂಬದವರಿಂದ ಅವರಿಗೆ ಸೇರಿದ ಯಾವುದೇ ಭೂಮಿ ಅಥವಾ ಸ್ವತ್ತನ್ನು ಕಸಿದುಕೊಳ್ಳುವುದು ಅಥವಾ ಅದರಿಂದ ಹೊರದೂಡುವುದು ಅಥವಾ ಯಾವುದೇ ರೀತಿಯ ಜುಲ್ಮಾನೆ ಅಥವಾ ದಂಡವನ್ನು ವಿಧಿಸುವುದು;

(v) ಅವರೊಂದಿಗೆ ವ್ಯವಹಾರ ನಡೆಸಲು, ಕೂಲಿಗಾಗಿ ಕೆಲಸ ನೀಡಲು ಅಥವಾ ವ್ಯಾಪಾರ ಮಾಡಲು ನಿರಾಕರಿಸುವುದು;

(vi) ಪ್ರತಿಫಲಕ್ಕಾಗಿ ಸಲ್ಲಿಸುವ ಸೇವೆಗಳಿಗಾಗಿ ಒಪ್ಪಂದದ ಅವಕಾಶಗಳು ಅಥವಾ ಸೇವೆಗಳಿಗೆ ಪ್ರವೇಶವನ್ನು ಒಳಗೊಂಡ ಅವಕಾಶಗಳನ್ನು ನಿರಾಕರಿಸುವುದು: ಅಥವಾ ಸರಳ ವ್ಯಾಪಾರ ಕ್ರಮದಲ್ಲಿ ಸಾಮಾನ್ಯವಾಗಿ ಮಾಡಬಹುದಾದ ಯಾವುದೇ ಕೆಲಸವನ್ನು ಅದೇ ನಿಬಂಧನೆಗಳ ಮೇಲೆ ಮಾಡುವುದನ್ನು ನಿರಾಕರಿಸುವುದು;

(vii) ಯಾವುದೇ ವೃತ್ತಿಪರ ಅಥವಾ ವ್ಯಾಪಾರಿ ಸಂಬಂಧಗಳಿಂದ ದೂರವಿರಿಸುವುದು;

(viii) ಸರಳ ವ್ಯವಹಾರ ಕ್ರಮದಲ್ಲಿ ಸಾಮಾನ್ಯವಾಗಿ ಮಾಡಬಹುದಾದ ಯಾವುದೇ ಕೆಲಸವನ್ನು ಅದೇ ನಿಬಂಧನೆಗಳ ಮೇಲೆ ಮಾಡುವುದನ್ನು ನಿರಾಕರಿಸುವುದು;

(ix) ಯಾರೊಬ್ಬರು ಇತರ ವ್ಯಕ್ತಿಗಳೊಂದಿಗೆ ನಿಭಾಯಿಸಬಹುದಾದ ವೃತ್ತಿಪರ ಅಥವಾ ವ್ಯಾಪಾರಿ ಸಂಬಂಧಗಳಿಂದ ದೂರವಿರಿಸುವುದು;

(x) ಸಾಲ ಅಥವಾ ಪತ್ತು (credit) ಪಡೆಯುವುದರಿಂದ ದೂರವಿಡುವುದು;

(xi) ಶಾಲೆಗೆ ಪ್ರವೇಶವನ್ನು ನಿರಾಕರಿಸುವುದು.

(2) ಈ ಅಧಿನಿಯಮದಲ್ಲಿ ಬಳಸಿರುವ ಆದರೆ ಪರಿಭಾಷಿಸದಿರುವ ಹಾಗೂ ಭಾರತೀಯ ನ್ಯಾಯ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 45) ಅಥವಾ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 46)ರಲ್ಲಿ ಪರಿಭಾಷಿಸಿರುವ ಪದಗಳು ಮತ್ತು ಪದಾವಳಿಗಳು, ಭಾರತೀಯ ನ್ಯಾಯ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 45) ಅಥವಾ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 46)ರಲ್ಲಿ ಅನುಕ್ರಮವಾಗಿ ಅವುಗಳಿಗೆ ನೀಡಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

**3. ವಿವಾಹವಾಗುವ ಸ್ವಾತಂತ್ರ್ಯ.-** (1) ಎಲ್ಲಾ ವ್ಯಕ್ತಿಗಳೂ ಸ್ವಾತಂತ್ರ್ಯದ ಹಕ್ಕು, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಅವರ ಆಯ್ಕೆಯ ವ್ಯಕ್ತಿಯನ್ನು ವಿವಾಹವಾಗುವ ಹಕ್ಕನ್ನೂ ಒಳಗೊಂಡಂತೆ, ಅವರದೇ ಬದುಕುಗಳ ಮೇಲೆ ಸ್ವಾಯತ್ತತೆಯ ಹಕ್ಕನ್ನು ಹೊಂದಿರತಕ್ಕದ್ದು.

(2) ಉಪ-ಪ್ರಕರಣ (1)ರ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಯಾರೇ ಇಬ್ಬರು ವ್ಯಕ್ತಿಗಳು ಅನ್ಯಥಾ ವಿವಾಹಕ್ಕೆ ಅರ್ಹರಾಗಿದ್ದು, ಇಬ್ಬರೂ ವ್ಯಕ್ತಿಗಳ ಪೋಷಕರು ಮತ್ತು ಕುಟುಂಬ ಸದಸ್ಯರನ್ನು ಒಳಗೊಂಡಂತೆ ಯಾರಿಂದಲೂ ಯಾವುದೇ ಅಡ್ಡಿಯಿಲ್ಲದೆ ಅವರ ಆಯ್ಕೆಯ ಯಾರೇ ವ್ಯಕ್ತಿಯನ್ನು ವಿವಾಹವಾಗುವ ಹಕ್ಕನ್ನು ಹೊಂದಲಾಗಿದೆ ಎಂದು ಈ ಮೂಲಕ ಘೋಷಿಸಿದೆ.

(3) ಇಬ್ಬರು ವಯಸ್ಕ ವ್ಯಕ್ತಿಗಳು ವಿವಾಹವಾಗಲು ಸಮ್ಮತಿಸಿದ ನಂತರ, ಪೋಷಕರು, ಕುಟುಂಬ, ಜಾತಿ ಅಥವಾ ಕುಲಗಳ ಒಪ್ಪಿಗೆಯು ಅಗತ್ಯವಿರುವಂತಿಲ್ಲ.

(4) ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪಿನ ಮೂಲಕ ಉಪ-ಪ್ರಕರಣ (1) ಮತ್ತು (2)ರಲ್ಲಿ ಉಲ್ಲೇಖಿಸಿದ ಹಕ್ಕುಗಳ ಚಲಾಯಿಸುವುದನ್ನು ತಡೆಯುವ ಯಾವುದೇ ಕ್ರಮವು, ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಅಪರಾಧವಾಗತಕ್ಕದ್ದು.

**4. ಅಂತರ್ಜಾತಿ ವಿವಾಹವಾಗಲು ಉದ್ದೇಶಿಸಿದ ಜೋಡಿಗಳಿಂದ ಘೋಷಣೆ.-** ಪರಸ್ಪರ ವಿವಾಹವಾಗಲು ಇಚ್ಛಿಸುವ ಯಾರೇ ಇಬ್ಬರು ವ್ಯಕ್ತಿಗಳು ತಮ್ಮ ವಯಸ್ಸು ಮತ್ತು ಸಮ್ಮತಿಯನ್ನು ಜಿಲ್ಲಾ ದಂಡಾಧಿಕಾರಿ ಅಥವಾ ಈ ಉದ್ದೇಶಕ್ಕಾಗಿ ಜಿಲ್ಲಾ ದಂಡಾಧಿಕಾರಿಯು ಗೊತ್ತುಪಡಿಸಿದ ನೋಡಲ್ ಅಧಿಕಾರಿಗೆ ಮೌಖಿಕವಾಗಿ ಅಥವಾ ಲಿಖಿತವಾಗಿ ಘೋಷಿಸುವ ಹಕ್ಕನ್ನು ಹೊಂದಿರತಕ್ಕದ್ದು, ಅವರು ಸದರಿ ಮಾಹಿತಿಯನ್ನು ಹತ್ತಿರದ ಪೊಲೀಸ್ ಠಾಣೆಗೆ ಕಳುಹಿಸತಕ್ಕದ್ದು ಮತ್ತು ಆ ಇಬ್ಬರು ವ್ಯಕ್ತಿಗಳ ಅಥವಾ ಮೂರನೇ ಪಕ್ಷಕಾರನ ಕುಟುಂಬ

ಸದಸ್ಯರು ಅಥವಾ ಸಂಬಂಧಿಕರು ಅಥವಾ ಸಮುದಾಯ ಸದಸ್ಯರನ್ನೂ ಒಳಗೊಂಡಂತೆ ಯಾರೇ ಇತರ ವ್ಯಕ್ತಿಯ ಸೂಚನೆಯ ಮೇರೆಗೆ ಸದರಿ ಜೋಡಿಯ ವಿರುದ್ಧ ಪೊಲೀಸ್ ಮತ್ತು/ ಅಥವಾ ಯಾರೇ ಇತರ ಅಧಿಕಾರಿಯು ಯಾವುದೇ ಕ್ರಮವನ್ನು ಕೈಗೊಳ್ಳತಕ್ಕದ್ದಲ್ಲ:

ಪರಂತು ಅಂಥ ಘೋಷಣೆಯು ಪ್ರಕರಣ 3ರಡಿಯಲ್ಲಿನ ಅವರ ಹಕ್ಕುಗಳನ್ನು ಚಲಾಯಿಸಲು ಆ ವ್ಯಕ್ತಿಗಳಿಗೆ ಪೂರ್ವಾಪೇಕ್ಷಿತವಾಗಿರತಕ್ಕದ್ದಲ್ಲ:

ಮತ್ತು ಪರಂತು ಅಂಥ ಘೋಷಣೆಯನ್ನು ಮಹಿಳೆಯು ಹದಿನೆಂಟು ವರ್ಷಗಳ ಮತ್ತು ಪುರುಷನು ಇಪ್ಪತ್ತೊಂದು ವರ್ಷಗಳ ವಯಸ್ಸನ್ನು ಮೀರಿರುವ ವ್ಯಕ್ತಿಗಳ ಸಂದರ್ಭದಲ್ಲಿ ಮಾಡತಕ್ಕದ್ದು.

**5. ಮರ್ಯಾದೆ ಅಥವಾ ಸಂಪ್ರದಾಯದ ಹೆಸರಿನಲ್ಲಿನ ಅಪರಾಧಗಳ ನಿಷೇಧ.**-(1) ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳು ಜಾತಿ, ಸಂಸ್ಕೃತಿ, ಪದ್ಧತಿ, ಸಂಪ್ರದಾಯ ಅಥವಾ ವಿಶೇಷವಾಗಿ "ಮರ್ಯಾದೆ" ಅಥವಾ ಸಂಪ್ರದಾಯದ ಹೆಸರಿನಲ್ಲಿ ಯುಕ್ತ ನಡವಳಿಕೆಯ ಸಾಂಸ್ಕೃತಿಕ, ಜಾತೀಯ, ಸಾಮಾಜಿಕ ಅಥವಾ ಸಾಂಪ್ರದಾಯಿಕ ಮಾನದಂಡಗಳು ಅಥವಾ ಪದ್ಧತಿಗಳನ್ನು ಉಲ್ಲಂಘಿಸಿರುವನೆಂಬ ಆಧಾರದ ಮೇಲೆ ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳ ವಿರುದ್ಧ ಯಾವುವೇ ಕೃತ್ಯಗಳನ್ನು ನಡೆಸತಕ್ಕದ್ದಲ್ಲ.

(2) ಉಪ-ಪ್ರಕರಣ (1)ರ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಮರ್ಯಾದೆ ಮತ್ತು ಸಂಪ್ರದಾಯದ ಹೆಸರಿನಲ್ಲಿ ಅಪರಾಧಗಳಿಗೆ ಕಾರಣವಾಗುವ ಕೃತ್ಯಗಳು ಈ ಮುಂದಿವುಗಳನ್ನು ಒಳಗೊಂಡಿರತಕ್ಕದ್ದು, ಆದರೆ ಇವುಗಳಿಗೆ ಸೀಮಿತವಾಗಿರತಕ್ಕದ್ದಲ್ಲ,-

(i) ದಂಪತಿಗಳಲ್ಲಿ ಇಬ್ಬರಿಗೂ ಅಥವಾ ಅವರೊಂದಿಗೆ ಸಂಪರ್ಕ ಹೊಂದಿದ ಯಾರೊಬ್ಬರಿಗೂ ಸಾವು, ದೈಹಿಕ ಹಿಂಸೆ ಅಥವಾ ಗಾಯವನ್ನು ಉಂಟುಮಾಡುವುದು;

(ii) ದಂಪತಿಗಳನ್ನು ಅಥವಾ ಅವರಲ್ಲಿ ಒಬ್ಬರನ್ನು ದೈಹಿಕವಾಗಿ ಅಥವಾ ಯಾವುದೇ ಸಂಪರ್ಕ ವಿಧಾನದ ಮೂಲಕ ಪರಸ್ಪರ ಭೇಟಿಯಾಗದಂತೆ ಅಥವಾ ಸಹವಾಸ ಮಾಡದಂತೆ ಅಥವಾ ವಾಸಿಸದಿರುವಂತೆ ಕಿರುಕುಳವನ್ನು ನೀಡುವುದು;

(iii) ಸಂತ್ರಸ್ತರು ಮತ್ತು / ಅಥವಾ ಅವರ ಸಂಗಾತಿಯನ್ನು ಅಥವಾ ಅವರೊಂದಿಗೆ ಸಂಪರ್ಕ ಹೊಂದಿರುವ ಯಾರೊಬ್ಬರನ್ನು ಅಪಹರಿಸುವುದು;

(iv) ದಂಪತಿಗಳು ಅಥವಾ ಅವರ ಕುಟುಂಬ ಅಥವಾ ಅವರೊಂದಿಗೆ ಸಂಬಂಧ ಹೊಂದಿರುವ ಯಾರಿಗಾದರೂ ಸಾಮಾಜಿಕ ಮತ್ತು ಆರ್ಥಿಕ ಬಹಿಷ್ಕಾರ ಹೇರುವುದು;

(v) ದಂಪತಿಗಳು ಅಥವಾ ಅವರ ಕುಟುಂಬ ಅಥವಾ ಸಂಬಂಧಿಕರನ್ನು ಅವರು ವಾಸಿಸುವ ಗ್ರಾಮ, ಪಟ್ಟಣ ಅಥವಾ ಪ್ರದೇಶದಿಂದ ಹೊರಹಾಕುವುದು, ಬಹಿಷ್ಕರಿಸುವುದು ಅಥವಾ ಬಲವಂತವಾಗಿ ಕದಲಿಸುವುದು ಅಥವಾ ಸ್ಥಳಾಂತರಿಸುವುದು / ಒಕ್ಕಲೆಬ್ಬಿಸುವುದು;

(vi) ದಂಪತಿಗಳು ಅಥವಾ ಅವರೊಂದಿಗೆ ಸಂಬಂಧ ಹೊಂದಿರುವ ಯಾರೊಬ್ಬರನ್ನು ಕೂಡಿಹಾಕಿಕೊಳ್ಳುವುದು ಅಥವಾ ಅವರಿಗೆ ದಂಡ ಪಾವತಿಸುವಂತೆ ಕೋರುವುದು;

(vii) ದಂಪತಿಗಳನ್ನು ಅಥವಾ ಅವರಲ್ಲಿ ಒಬ್ಬರನ್ನು ಅಥವಾ ಅವರ ಕುಟುಂಬವನ್ನು ಅಥವಾ ಅವರೊಂದಿಗೆ ಸಂಬಂಧ ಹೊಂದಿರುವ ಯಾರೊಬ್ಬರನ್ನು ಯಾವುದೇ ರೀತಿಯ ಪ್ರತೀಕಾರದ ಕ್ರಮದಲ್ಲಿ ಬೆದರಿಕೆಯನ್ನು ಹಾಕುವುದು;

(viii) ಆಕ್ಷೇಪಿಸಲಾದ ಮದುವೆ ಅಥವಾ ಸಂಬಂಧವನ್ನು ತಡೆಯಲು ಅಥವಾ ನಿರಾಕರಿಸಲು ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳ ಮೇಲೆ ವೈಯಕ್ತಿಕವಾಗಿ ಅಥವಾ ಸಾಮೂಹಿಕವಾಗಿ ಪ್ರಚೋದಿಸುವುದು ಅಥವಾ ನೇರವಾಗಿ ಅಥವಾ ಪರೋಕ್ಷವಾಗಿ ಒತ್ತಡವನ್ನು ಹೇರುವುದು ಅಥವಾ ಅಂಥ ದಂಪತಿಗಳಿಗೆ ಅಥವಾ ಅವರಲ್ಲಿ ಯಾರಿಗಾದರೂ ಅಥವಾ ಅವರ ಬೆಂಬಲಿಗರ ಮೇಲೆ ಹಗೆತನದ ವಾತಾವರಣವನ್ನು ಸೃಷ್ಟಿಸುವುದು;

(ix) ಮದುವೆಯಾದ ದಂಪತಿಗಳನ್ನು ಸೋದರ-ಸೋದರಿಯರೆಂದು ಬಲವಂತವಾಗಿ ಘೋಷಣೆ ಮಾಡುವುದು;

(x) ಜೀವಂತ ವ್ಯಕ್ತಿಯ ವಿರುದ್ಧ ಸಾಂಕೇತಿಕ ವಿಯೋಗ (disownment) ಆಚರಣೆಗಳನ್ನು (ತಿಥಿ ಅಥವಾ ಮರಣ ಸಮಾನವಾದ ಸಮಾರಂಭಗಳನ್ನು) ನಡೆಸುವುದು;

(xi) ಆಸ್ತಿಯಲ್ಲಿನ ಉತ್ತರಾಧಿಕಾರದ ಹಕ್ಕುಗಳನ್ನು ಲೋಪದಿಂದ ನಿರಾಕರಿಸುವುದು ಅಥವಾ ಹಸ್ತಕ್ಷೇಪ ಮಾಡುವುದು;

(xii) ವ್ಯಕ್ತಿ, ದಂಪತಿ ಅಥವಾ ಅವರನ್ನು ಬೆಂಬಲಿಸುವ ವ್ಯಕ್ತಿಗಳ ವಿರುದ್ಧ ಯಾವುದೇ ದೈಹಿಕ ಅಥವಾ ಮಾನಸಿಕ ಅಥವಾ ಮನೋವ್ಯಾಕುಲ ಕಿರುಕುಳ ಅಥವಾ ಬೆದರಿಕೆಯ ಕೃತ್ಯ ಅಥವಾ ಕೃತ್ಯಗಳು;

(xiii) ಯಾರೇ ವ್ಯಕ್ತಿಯನ್ನು ಕಾನೂನುಬಾಹಿರವಾಗಿ ಸೆರೆಯಲ್ಲಿರಿಸುವುದು ಅಥವಾ ಗೃಹಬಂಧನದಲ್ಲಿ ಇರಿಸುವುದು;

(xiv) ವ್ಯಕ್ತಿಯ ಫೋನ್, ಲ್ಯಾಪ್‌ಟಾಪ್ ಮತ್ತು ಯಾವುದೇ ಸಂವಹನ ಸಾಧನಗಳನ್ನು ವಶಪಡಿಸಿಕೊಳ್ಳುವುದು;

(xv) ದಂಪತಿಗಳು ಅಥವಾ ಅವರಲ್ಲಿ ಒಬ್ಬರ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸುವುದು;

(xvi) ದಂಪತಿಗಳು ಅಥವಾ ಅವರಲ್ಲಿ ಒಬ್ಬರ ಉದ್ಯೋಗವನ್ನು ಅವರ ಉದ್ಯೋಗದಾತರ ಮೂಲಕ ಕೊನೆಗೊಳಿಸುವುದು;

(xvii) ಯಾರೇ ವ್ಯಕ್ತಿಯ ವಿರುದ್ಧ ಲೈಂಗಿಕ ಹಿಂಸೆ ಅಥವಾ ಲೈಂಗಿಕ ಕಿರುಕುಳದ ಕೃತ್ಯವನ್ನು ಎಸಗುವುದು;

(xviii) ಯಾರೇ ಮಹಿಳೆಯ ಮೇಲೆ ಗರ್ಭಪಾತಕ್ಕಾಗಿ ಅಥವಾ ಗರ್ಭಸ್ರಾವಕ್ಕಾಗಿ ಒತ್ತಾಯಿಸುವುದು ಅಥವಾ ಉಂಟುಮಾಡುವುದು;

(xix) ಅಂತರ್ಜಾತಿ ವಿವಾಹವಾಗಿರುವ ಯಾರೇ ವ್ಯಕ್ತಿ ಅಥವಾ ಇಬ್ಬರೂ ವ್ಯಕ್ತಿಗಳನ್ನು ಅವರ ಒಪ್ಪಿಗೆಯ ವಿರುದ್ಧ ಬಲವಂತವಾಗಿ ಮದುವೆ ಮಾಡಿಸುವುದು;

(xx) ದಂಪತಿಗಳ ಮದುವೆಯನ್ನು ಅವರ ಒಪ್ಪಿಗೆಯ ವಿರುದ್ಧ ಬಲವಂತವಾಗಿ ಮುರಿಯುವುದು;

(xxi) ಸ್ಥಳೀಯವಾಗಿ ಅಥವಾ ಸಮುದಾಯದ ನಡುವೆ ಸುಳ್ಳು ಮಾಹಿತಿಯೊಂದಿಗೆ ದಂಪತಿಗಳು ಮತ್ತು ಅವರ ಕುಟುಂಬದ ವಿರುದ್ಧ ದ್ವೇಷವನ್ನು ಹರಡುವುದು ಅಥವಾ ಹೆಸರನ್ನು ಕೆಡಿಸುವುದು; ಮತ್ತು

(xxii) ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಬಹಿಷ್ಕಾರ ಹಾಕುವುದು.

**6. ಕಾನೂನುಬಾಹಿರ ಸಭೆ ಸೇರುವಿಕೆಯ ಪ್ರತಿಬಂಧ.-** ಐದು ಅಥವಾ ಹೆಚ್ಚಿನ ವ್ಯಕ್ತಿಗಳ ಗುಂಪು, ಯಾವುದೇ ಸಮಯದಲ್ಲಿ, ಯಾವುದೇ ವಿವಾಹವು ಜಾತಿ, ಪಂಗಡ, ಸಮುದಾಯ, ಸಂಪ್ರದಾಯವನ್ನು ಅವಮಾನಿಸಿದೆ ಅಥವಾ ಕುಟುಂಬ ಅಥವಾ ಸಮುದಾಯದ ಇಚ್ಛೆಗೆ ವಿರುದ್ಧವಾಗಿದೆ ಎಂಬ ಆಧಾರದ ಮೇಲೆ ಅಂಥ ವಿವಾಹವನ್ನು ಚರ್ಚಿಸುವ ದೃಷ್ಟಿಯಿಂದ ಅಥವಾ ಖಂಡಿಸುವ ಉದ್ದೇಶದಿಂದ ಗುಂಪುಗೂಡತಕ್ಕದ್ದಲ್ಲ, ಸಭೆಸೇರತಕ್ಕದ್ದಲ್ಲ, ಒಗ್ಗೂಡತಕ್ಕದ್ದಲ್ಲ.

**7. ನಿರ್ಬಂಧಕಾಜ್ಞೆಗಳನ್ನು ಹೊರಡಿಸುವ ನ್ಯಾಯಾಲಯದ ಅಧಿಕಾರ.-** (1) ಯಾರೇ ವ್ಯಕ್ತಿಯು, 3ನೇ ಪ್ರಕರಣದಡಿ ಅವರ ಯಾವುದೇ ಹಕ್ಕುಗಳನ್ನು ಚಲಾಯಿಸಿದ ಅಥವಾ ಚಲಾಯಿಸುವ ಉದ್ದೇಶ ಹೊಂದಿದ್ದರೆ ಅವರ ಪೋಷಕರು, ಕುಟುಂಬ ಸದಸ್ಯರು ಅಥವಾ ಯಾರೇ ಇತರ ವ್ಯಕ್ತಿಗಳಿಂದ ಅಂಥ ಹಕ್ಕುಗಳ ಚಲಾವಣೆಯಲ್ಲಿ ಯಾವುದೇ ಹಸ್ತಕ್ಷೇಪವಾಗುವುದೆಂಬ ಆತಂಕದ ಮೇಲೆ ಸಿವಿಲ್ ನ್ಯಾಯಾಲಯವನ್ನು ಕೋರಬಹುದು ಮತ್ತು ಅಂಥ ಹಸ್ತಕ್ಷೇಪವನ್ನು ತಡೆಯುವ ನಿರ್ಬಂಧಕಾಜ್ಞೆಯನ್ನು ತೆಗೆದುಕೊಳ್ಳಬಹುದು ಹಾಗೂ ರಕ್ಷಣೆಯ ಆದೇಶವನ್ನು ಸಹ ಪಡೆಯಬಹುದು.

(2) ಅಂಥ ಅರ್ಜಿಯ ಮೇಲೆ, ನ್ಯಾಯಾಲಯವು ಅವರ ಪೋಷಕರು, ಕುಟುಂಬ, ಸಂಬಂಧಿಕರು ಅಥವಾ ಯಾರೇ ಇತರ ಸದಸ್ಯರನ್ನೊಳಗೊಂಡ ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳ ವಿರುದ್ಧ ನಿರ್ಬಂಧಕಾಜ್ಞೆಯನ್ನು ಹೊರಡಿಸತಕ್ಕದ್ದು ಮತ್ತು ವ್ಯಕ್ತಿಗಳ ಹಕ್ಕುಗಳೊಂದಿಗಿನ ಹಸ್ತಕ್ಷೇಪದಿಂದ ಅವರನ್ನು ತಡೆಯತಕ್ಕದ್ದು ಹಾಗೂ ಸಂಬಂಧಪಟ್ಟ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ರಕ್ಷಿಸಲು ಅಧಿಕಾರವ್ಯಾಪ್ತಿಯ ಪೊಲೀಸರಿಗೆ ನಿರ್ದೇಶಿಸಿ ರಕ್ಷಣಾ ಆದೇಶವನ್ನು ನೀಡತಕ್ಕದ್ದು:

ಪರಂತು, ಯಾವುದೇ ತುರ್ತು ಸಂದರ್ಭದಲ್ಲಿ ನ್ಯಾಯಾಲಯವು, ನೋಟಿಸನ್ನು ಹೊರಡಿಸುವ ಮೊದಲು, ಮಧ್ಯಕಾಲೀನ (ad-interim) ಅಥವಾ ಏಕಪಕ್ಷೀಯ ನಿರ್ಬಂಧಕಾಜ್ಞೆ ಮತ್ತು ರಕ್ಷಣಾ ಆದೇಶವನ್ನು ಹೊರಡಿಸುವ ಅಧಿಕಾರ ಹೊಂದಿರತಕ್ಕದ್ದು.

(3) ರಕ್ಷಣಾ ಆದೇಶವನ್ನು ಹೊರಡಿಸಿದ ತರುವಾಯ, ಸಂಬಂಧಪಟ್ಟ ವ್ಯಕ್ತಿ ಅಥವಾ ವ್ಯಕ್ತಿಗಳಿಗೆ ಸಂಪೂರ್ಣ ರಕ್ಷಣೆಯನ್ನು ಖಚಿತಪಡಿಸುವುದು ಪೊಲೀಸರ ಜವಾಬ್ದಾರಿಯಾಗಿರತಕ್ಕದ್ದು ಹಾಗೂ ಈ ಅಧಿನಿಯಮದಡಿ ನಿಯಮಿಸಬಹುದಾದ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(4) ಆತನ ವಿರುದ್ಧ ಉಪಪ್ರಕರಣ (1)ರಡಿ ಹೊರಡಿಸಲಾದ ನಿರ್ಬಂಧಕಾಜ್ಞೆಯನ್ನು ಯಾರೇ ವ್ಯಕ್ತಿಯು ಪಾಲಿಸದೇ ಇದ್ದರೆ ಎರಡು ವರ್ಷಗಳ ಅವಧಿಗೆ ವಿಸ್ತರಿಸಬಹುದಾದ ಕಾರಾವಾಸದೊಂದಿಗೆ ಅಥವಾ ಒಂದು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆ ಎರಡರಲ್ಲೊಂದು ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**8. 'ಮರ್ಯಾದೆ'ಯ ಹೆಸರಿನಲ್ಲಿ ಹತ್ಯೆ.-** ಭಾರತೀಯ ನ್ಯಾಯ ಸಂಹಿತೆಯಡಿ ಉಪಬಂಧಿಸಲಾದ ದಂಡನೆಗೆ ಬಾಧಕವಾಗದಂತೆ, 'ಮರ್ಯಾದೆ'ಯ ಹೆಸರಿನಲ್ಲಿ ದಂಪತಿ ಅಥವಾ ಅವರಲ್ಲಿ ಯಾರೊಬ್ಬರನ್ನು ಅಥವಾ ಯಾರೇ ವ್ಯಕ್ತಿಯನ್ನು ಯಾವುದೇ ರೀತಿಯ ಮೂಲಕ ಅವರ ಸಾವಿಗೆ ಕಾರಣನಾದ ಅಥವಾ ಸಾವಿಗೆ ಕಾರಣವಾಗುವ ಯಾವುದೇ ಅಂಥ ಕೃತ್ಯವನ್ನು ಎಸಗಿದ ಯಾರೇ ವ್ಯಕ್ತಿಯು ಕನಿಷ್ಟ ಐದು ವರ್ಷಗಳ ಅವಧಿಯ ಕಾರಾವಾಸದೊಂದಿಗೆ ದಂಡಿತನಾಗತಕ್ಕದ್ದು.

**9. ತೀವ್ರ ಗಾಯ ಅಥವಾ ಹಾನಿ.-** (1) ಮರ್ಯಾದೆಯ ಹೆಸರಿನಲ್ಲಿ ದಂಪತಿ ಅಥವಾ ಅವರಲ್ಲಿ ಯಾರೊಬ್ಬರಿಗೆ ತೀವ್ರ ಗಾಯಗೊಳ್ಳಲು ಕಾರಣನಾದ ಯಾರೇ ವ್ಯಕ್ತಿಯು ಮೂರು ವರ್ಷಗಳಿಗೆ ಕಡಿಮೆಯಿಲ್ಲದ ಅವಧಿಯ ಕಾರಾವಾಸದೊಂದಿಗೆ ಮತ್ತು ಮೂರು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು.

(2) 'ಮರ್ಯಾದೆ'ಯ ಹೆಸರಿನಲ್ಲಿ ದಂಪತಿ ಅಥವಾ ಅವರಲ್ಲಿ ಯಾರೊಬ್ಬರಿಗೆ ಸಣ್ಣ ಗಾಯವಾಗಲು ಕಾರಣನಾದ ಯಾರೇ ವ್ಯಕ್ತಿಯು ಎರಡು ವರ್ಷಗಳಿಗೆ ಕಡಿಮೆಯಲ್ಲದ ಅವಧಿಯ ಕಠಿಣ ಕಾರಾವಾಸದೊಂದಿಗೆ ಮತ್ತು ಎರಡು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು.

**ವಿವರಣೆ:** 'ತೀವ್ರ ಗಾಯ' ಮತ್ತು 'ಸಣ್ಣ ಗಾಯ' ಎಂಬುದಕ್ಕೆ ಭಾರತೀಯ ನ್ಯಾಯ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 45)ರ 114 ಮತ್ತು 116ನೇ ಪ್ರಕರಣದಲ್ಲಿ ಅವುಗಳಿಗೆ ನೀಡಿರುವ ಅದೇ ಅರ್ಥವನ್ನು ಹೊಂದಿರತಕ್ಕದ್ದು.

**10. ಮರ್ಯಾದೆ ಅಥವಾ ಸಂಪ್ರದಾಯದ ಹೆಸರಿನಲ್ಲಿನ ಅಪರಾಧಗಳು ಮತ್ತು 3ನೇ ಪ್ರಕರಣದಡಿಯ ಹಕ್ಕುಗಳ ಚಲಾವಣೆಯನ್ನು ತಡೆಯುವ ಯಾವುದೇ ಇತರ ಕೃತ್ಯ.-** 5ನೇ ಪ್ರಕರಣದಲ್ಲಿ ಪರಿಭಾಷಿಸಲಾದಂತೆ "ಮರ್ಯಾದೆ" ಅಥವಾ "ಸಂಪ್ರದಾಯ"ದ ಹೆಸರಿನಲ್ಲಿನ ಅಪರಾಧಗಳಿಗೆ ಕಾರಣನಾಗುವ ಯಾರೊಬ್ಬರೂ,-

(ಎ) "ಮರ್ಯಾದೆ"ಯ ಹೆಸರಿನಲ್ಲಿ ಹತ್ಯೆಗೆ ಕಾರಣವಾಗದೆ, ತೀವ್ರ ಗಾಯ ಮತ್ತು ಹಾನಿಗಾಗಿ, ಎರಡು ವರ್ಷಗಳಿಗೆ ಕಡಿಮೆಯಿಲ್ಲದ ಆದರೆ ಐದು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದೊಂದಿಗೆ ದಂಡಿತನಾಗತಕ್ಕದ್ದು ಮತ್ತು ಒಂದು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಗೂ ಸಹ ಹೊಣೆಗಾರನಾಗತಕ್ಕದ್ದು.

(ಬಿ) ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳು 5ನೇ ಪ್ರಕರಣದ (1) ಮತ್ತು (2)ನೇ ಉಪಪ್ರಕರಣಗಳಲ್ಲಿ ಉಲ್ಲೇಖಿಸಲಾದ ಹಕ್ಕುಗಳ ಚಲಾವಣೆಯನ್ನು ತಡೆಯಲು, ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪಿನ ಮೂಲಕ 9 ಮತ್ತು 10ನೇ ಪ್ರಕರಣದಲ್ಲಿ ಪರಿಭಾಷಿಸದೇ ಇರುವ ಯಾವುದೇ ಕೃತ್ಯವನ್ನು ಎಸಗಿದಲ್ಲಿ, ಎರಡು ವರ್ಷಗಳಿಗೆ ಕಡಿಮೆಯಿಲ್ಲದ ಆದರೆ ಐದು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದೊಂದಿಗೆ ದಂಡಿತನಾಗತಕ್ಕದ್ದು

ಮತ್ತು ಒಂದು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಗೂ ಸಹ ಹೊಣೆಗಾರನಾಗತಕ್ಕದ್ದು.

**11. ಅಪರಾಧಿಕ ಬೆದರಿಸುವಿಕೆ.-** ಕಾನೂನುಬಾಹಿರವಾಗಿ ಸಭೆಸೇರುವ ಯಾರೇ ಸದಸ್ಯನನ್ನು ಒಳಗೊಂಡು ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳು, ಮದುವೆಯಾಗುವ ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳು ಅಥವಾ ಅವರ ಯಾರೇ ಸಂಬಂಧಿಕರು ಅಥವಾ ಬೆಂಬಲಿಗರನ್ನು ಅಪರಾಧಿಕವಾಗಿ ಬೆದರಿಸಲು ತೊಡಗಿದರೆ, ಮೂರು ವರ್ಷಗಳಿಗೆ ಕಡಿಮೆಯಿಲ್ಲದ ಆದರೆ ಐದು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದೊಂದಿಗೆ ದಂಡಿತನಾಗತಕ್ಕದ್ದು ಮತ್ತು ಎರಡು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಗೂ ಸಹ ಹೊಣೆಗಾರನಾಗತಕ್ಕದ್ದು:

ಪರಂತು, ಭಾರತೀಯ ನ್ಯಾಯ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 45)ರ 351(3)ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ವಿವರಣೆಯ ಹಾನಿ ಅಥವಾ ಗಾಯಕ್ಕೆ ಕಾರಣವಾಗುವ ಬೆದರಿಕೆಯಾದಲ್ಲಿ, ಕಾರಾವಾಸವನ್ನು ಗರಿಷ್ಠ ಏಳು ವರ್ಷಗಳಿಗೆ ವಿಸ್ತರಿಸತಕ್ಕದ್ದು.

**ವಿವರಣೆ:** 'ಅಪರಾಧಿಕ ಬೆದರಿಸುವಿಕೆ' ಎಂಬ ಪದಾವಳಿಯು, ಭಾರತೀಯ ನ್ಯಾಯ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 45)ರ 351(1)ನೇ ಪ್ರಕರಣದಲ್ಲಿ ಅದಕ್ಕೆ ನೀಡಿರುವ ಅದೇ ಅರ್ಥವನ್ನು ಹೊಂದಿರತಕ್ಕದ್ದು.

**12. ಕಾನೂನುಬಾಹಿರ ಸಭೆಸೇರುವಿಕೆ.-** 7ನೇ ಪ್ರಕರಣದಲ್ಲಿ ವಿವರಿಸಲಾದಂತೆ ಯಾವುದೇ ಕಾನೂನುಬಾಹಿರ ಸಭೆಯಲ್ಲಿ ಭಾಗವಹಿಸುವ ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳು, ಅದರಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ಭಾಗವಹಿಸುವ ಪ್ರತಿ ಸದಸ್ಯನನ್ನೊಳಗೊಂಡು, ಆರು ತಿಂಗಳುಗಳಿಗೆ ಕಡಿಮೆಯಿಲ್ಲದ ಆದರೆ ಐದು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದೊಂದಿಗೆ ದಂಡಿತರಾಗತಕ್ಕದ್ದು ಮತ್ತು ಒಂದು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಗೂ ಸಹ ಹೊಣೆಗಾರರಾಗಿರತಕ್ಕದ್ದು.

**13. ಸಾಕ್ಷ್ಯವನ್ನು ತಿರುಚುವುದು.-** ಈ ಅಧಿನಿಯಮದಡಿಯಲ್ಲಿ ಯಾವುದೇ ಅಪರಾಧವು ಎಸಗಲಾಗಿದೆ ಎಂದು ತಿಳಿದಿದ್ದರೂ ಅಥವಾ ನಂಬಲು ಸಕಾರಣವಿದ್ದರೂ, ಅಪರಾಧಿಯನ್ನು ದಂಡನೆಯಿಂದ ರಕ್ಷಿಸುವ ಉದ್ದೇಶದೊಂದಿಗೆ ಆ ಅಪರಾಧ ಎಸಗಲಾಗಿದೆ ಎಂಬುದಕ್ಕೆ ಇರುವ ಯಾವುದೇ ಸಾಕ್ಷ್ಯವು ಅದೃಶ್ಯವಾಗುವಂತೆ ಮಾಡುವ, ಅಥವಾ ಅದೇ ಉದ್ದೇಶದಿಂದ ಆ ಅಪರಾಧಕ್ಕೆ ಸಂಬಂಧಿಸಿದಂತೆ ತನಗೆ ಸುಳ್ಳು ಎಂದು ತಿಳಿದಿರುವ ಅಥವಾ ನಂಬಿರುವ ಯಾವುದೇ ಮಾಹಿತಿಯನ್ನು ನೀಡುವ ಯಾರೊಬ್ಬನು, ಆ ಅಪರಾಧಕ್ಕಾಗಿ ಉಪಬಂಧಿಸಲಾದ ದಂಡನೆಯಿಂದ ದಂಡಿತನಾಗತಕ್ಕದ್ದು.

**14. ದುಷ್ಪ್ರೇರಣೆ, ಪ್ರಯತ್ನ ಅಥವಾ ಪಿತೂರಿಗಾಗಿ ದಂಡನೆ.-** ಈ ಅಧಿನಿಯಮದಡಿಯ ಅಪರಾಧವನ್ನು ಮಾಡಲು ದುಷ್ಪ್ರೇರೇಪಿಸುವ, ಪ್ರಯತ್ನಿಸುವ ಅಥವಾ ಪಿತೂರಿ ನಡೆಸುವ ಅಥವಾ ಯಾರೇ ವ್ಯಕ್ತಿಯನ್ನು ಆತ್ಮಹತ್ಯೆಗೆ ಪ್ರಚೋದಿಸುವ ಅಥವಾ ಬೆಂಬಲಿಸುವ ಯಾರೊಬ್ಬನು, ಆ ಅಪರಾಧವನ್ನು ಆತನು ಸ್ವತಃ ಎಸಗಿದಲ್ಲಿ ಹೇಗೋ ಅದೇ ರೀತಿಯಲ್ಲಿ ದಂಡಿತನಾಗತಕ್ಕದ್ದು.

**15. ಅಪರಾಧಗಳು ಸಂಜ್ಞೇಯ ಮತ್ತು ಜಾಮೀನು-ರಹಿತವಾಗಿರುವುದು.-** ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 46)ರ ಉಪಬಂಧಗಳಲ್ಲಿ ಏನೇ ಒಳಗೊಂಡಿದ್ದರೂ ಅವಕ್ಕೆ ಬಾಧಕವಾಗದಂತೆ, ಈ ಅಧಿನಿಯಮದಡಿಯ ಎಲ್ಲಾ ಅಪರಾಧಗಳು ಸಂಜ್ಞೇಯ ಮತ್ತು ಜಾಮೀನು-ರಹಿತವಾಗಿರತಕ್ಕದ್ದು.

**16. ಪ್ರಕರಣ 3ರಡಿ ಅವರ ಹಕ್ಕುಗಳನ್ನು ಚಲಾಯಿಸುವ ವ್ಯಕ್ತಿಗಳ ಹಕ್ಕುಗಳು ಹಾಗೂ ಈ ಅಧಿನಿಯಮದಡಿಯ ಯಾವುದೇ ಅಪರಾಧದ ಸಂತ್ರಸ್ತರು.-** 3ನೇ ಪ್ರಕರಣದಡಿ ಅವರ ಹಕ್ಕುಗಳನ್ನು ಚಲಾಯಿಸುವ ಯಾರೇ ವ್ಯಕ್ತಿ ಅಥವಾ ಈ ಅಧಿನಿಯಮದಡಿ ಸಂತ್ರಸ್ತನಾದವನು ಈ ಮುಂದಿನ ಹಕ್ಕುಗಳನ್ನು ಹೊಂದಿರತಕ್ಕದ್ದು,-

(1) ಯಾವುದೇ ರೀತಿಯ ಬೆದರಿಕೆ ಅಥವಾ ಬಲವಂತ ಅಥವಾ ಆಮಿಷ ಅಥವಾ ಹಿಂಸೆ ಅಥವಾ ಹಿಂಸಾಚಾರದ ಬೆದರಿಕೆಗಳ ವಿರುದ್ಧ ತಮಗಾಗಿ, ತಮ್ಮ ಅವಲಂಬಿತರಿಗಾಗಿ ಮತ್ತು ಸಾಕ್ಷಿಗಳಿಗಾಗಿ ರಕ್ಷಣೆಯನ್ನು ಕೋರುವುದು.

(2) ಸಂತ್ರಸ್ತರ ವಯಸ್ಸು ಅಥವಾ ಲಿಂಗ ಅಥವಾ ಶೈಕ್ಷಣಿಕ ಹಿಂದುಳಿದಿರುವಿಕೆ ಅಥವಾ ಬಡತನದ ಕಾರಣದಿಂದ ಉದ್ಭವಿಸುವ ಯಾವುದೇ ವಿಶೇಷ ಅಗತ್ಯಗಳನ್ನು ಯುಕ್ತವಾಗಿ ಪರಿಗಣಿಸಿ, ನ್ಯಾಯಸಮ್ಮತವಾಗಿ, ಗೌರವದಿಂದ ಮತ್ತು ಘನತೆಯಿಂದ ನಡೆಸಿಕೊಳ್ಳುವುದು.

(3) ಜಾಮೀನು ಪ್ರಕ್ರಿಯೆಯನ್ನು ಒಳಗೊಂಡಂತೆ ಯಾವುದೇ ನ್ಯಾಯಾಲಯದ ವ್ಯವಹರಣೆಗಳ ಕುರಿತು ಸಮಂಜಸವಾದ, ನಿಖರವಾದ ಮತ್ತು ಸಕಾಲಿಕವಾದ ತಿಳುವಳಿಕೆಯನ್ನು ಪಡೆಯುವುದು; ಸರ್ಕಾರಿ ಅಭಿಯೋಜಕರು ಅಥವಾ ರಾಜ್ಯ ಸರ್ಕಾರವು ಅಂಥ ವ್ಯಕ್ತಿಗೆ ಈ ಅಧಿನಿಯಮದಡಿಯಲ್ಲಿನ ಯಾವುದೇ ವ್ಯವಹರಣೆಗಳ ಬಗ್ಗೆ ಮಾಹಿತಿ ನೀಡತಕ್ಕದ್ದು.

(4) ಈ ಅಧಿನಿಯಮದಡಿ ಆರೋಪಿಯ ಜಾಮೀನು, ವಿಮೋಚನೆ, ಬಿಡುಗಡೆ, ಪೆರೋಲ್, ಅಪರಾಧನಿರ್ಣಯ ಅಥವಾ ಶಿಕ್ಷೆಗೆ ಸಂಬಂಧಿಸಿದ ಯಾವುದೇ ವ್ಯವಹರಣೆಯಲ್ಲಿ ಅಥವಾ ಯಾವುದೇ ಸಂಬಂಧಿತ ವ್ಯವಹರಣೆ ಅಥವಾ ವಾದವಿವಾದಗಳಲ್ಲಿ ಭಾಗವಹಿಸಿ ತನ್ನ ಅಹವಾಲನ್ನು ಸಲ್ಲಿಸುವುದು ಹಾಗೂ ಖುಲಾಸೆಯ ವಿರುದ್ಧ ಮೇಲ್ಮನವಿ ದಾಖಲಿಸುವುದು, ಅಪರಾಧನಿರ್ಣಯ, ಖುಲಾಸೆ ಅಥವಾ ಶಿಕ್ಷೆಯ ಬಗ್ಗೆ ಲಿಖಿತ ಕೋರಿಕೆಯನ್ನು ಸಲ್ಲಿಸುವುದು ಮತ್ತು ಈ ಉದ್ದೇಶಕ್ಕಾಗಿ ತಮ್ಮ ಇಚ್ಛೆಯ ಕಾನೂನು ಸಲಹೆಗಾರರನ್ನು ನೇಮಿಸಿಕೊಳ್ಳುವುದು.

(5) ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 46)ರಲ್ಲಿ ಏನೇ ಒಳಗೊಂಡಿದ್ದರೂ ಅದಕ್ಕೆ ಬಾಧಕವಾಗದಂತೆ, ಈ ಅಧಿನಿಯಮಡಿ ಪ್ರಕರಣದ ಅಧಿವಿಚಾರಣೆ ನಡೆಸುತ್ತಿರುವ ನ್ಯಾಯಾಲಯವು ನ್ಯಾಯೋದ್ದೇಶವನ್ನು ಕಾಪಾಡಲು ಸಂತ್ರಸ್ತರಿಗೆ, ಆತನ/ಆಕೆಯ ಅವಲಂಬಿತರಿಗೆ, ಮಾಹಿತಿದಾರರಿಗೆ ಅಥವಾ ಸಾಕ್ಷಿಗಳಿಗೆ ಸಂಪೂರ್ಣ ರಕ್ಷಣೆಯನ್ನು ಒದಗಿಸತಕ್ಕದ್ದು.

(6) ಉಪ-ಪ್ರಕರಣ (5)ರ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಸಂಬಂಧಪಟ್ಟ ವಿಶೇಷ ನ್ಯಾಯಾಲಯವು ಅದರ ಮುಂದಿರುವ ಯಾವುದೇ ವ್ಯವಹರಣೆಯಲ್ಲಿ ಸಂತ್ರಸ್ತರು ಅಥವಾ ಆತನ/ಆಕೆಯ ಅವಲಂಬಿತರು, ಮಾಹಿತಿದಾರರು ಅಥವಾ ಸಾಕ್ಷಿಗಳು ಸಲ್ಲಿಸಿದ ಅರ್ಜಿಯ ಮೇಲೆ, ಅಥವಾ ಅಂಥ ಸಂತ್ರಸ್ತರು, ಮಾಹಿತಿದಾರರು ಅಥವಾ ಸಾಕ್ಷಿಗಳಿಗೆ ಸಂಬಂಧಿಸಿದಂತೆ ವಿಶೇಷ ಸರ್ಕಾರಿ ಅಭಿಯೋಜಕರು ಸಲ್ಲಿಸಿದ ಅರ್ಜಿಯ ಮೇಲೆ ಅಥವಾ ತಾನೇ ಸ್ವತಃ ಈ ಮುಂದಿನವುಗಳನ್ನು ಒಳಗೊಂಡ ಅಂಥ ಕ್ರಮಗಳನ್ನು ಕೈಗೊಳ್ಳಬಹುದು,-

(ಎ) ತನ್ನ ಆದೇಶಗಳಲ್ಲಿ ಅಥವಾ ತೀರ್ಪುಗಳಲ್ಲಿ ಅಥವಾ ಸಾರ್ವಜನಿಕರಿಗೆ ಲಭ್ಯವಿರುವ ಪ್ರಕರಣದ ಯಾವುದೇ ದಾಖಲೆಗಳಲ್ಲಿ ಸಾಕ್ಷಿಗಳ ಹೆಸರು ಮತ್ತು ವಿಳಾಸಗಳನ್ನು ಗೌಪ್ಯವಾಗಿರಿಸುವುದು;

(ಬಿ) ಸಾಕ್ಷಿಗಳ ಗುರುತು ಮತ್ತು ವಿಳಾಸಗಳನ್ನು ಬಹಿರಂಗಪಡಿಸದಂತೆ ನಿರ್ದೇಶನಗಳನ್ನು ನೀಡುವುದು;

(ಸಿ) ಸಂತ್ರಸ್ತರು, ಮಾಹಿತಿದಾರರು ಅಥವಾ ಸಾಕ್ಷಿಗಳಿಗೆ ನೀಡಲಾಗುವ ಕಿರುಕುಳಕ್ಕೆ ಸಂಬಂಧಿಸಿದ ಯಾವುದೇ ದೂರಿನ ಬಗ್ಗೆ ತಕ್ಷಣದ ಕ್ರಮ ಕೈಗೊಳ್ಳುವುದು ಮತ್ತು ಅಗತ್ಯವಿದ್ದಲ್ಲಿ ಅದೇ ದಿನ ರಕ್ಷಣೆಗೆ ಸಂಬಂಧಿಸಿದ ಸೂಕ್ತ ಆದೇಶಗಳನ್ನು ಹೊರಡಿಸುವುದು:

ಪರಂತು, ಖಂಡ (ಸಿ) ರಡಿಯಲ್ಲಿ ಸ್ವೀಕರಿಸಲಾದ ದೂರಿನ ವಿಚಾರಣೆ ಅಥವಾ ತನಿಖೆಯನ್ನು ಮೂಲ ಪ್ರಕರಣದಿಂದ ಪ್ರತ್ಯೇಕವಾಗಿ ಅಧಿವಿಚಾರಣೆ ನಡೆಸತಕ್ಕದ್ದು ಮತ್ತು ದೂರು ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳ ಅವಧಿಯೊಳಗೆ ಪೂರ್ಣಗೊಳಿಸತಕ್ಕದ್ದು.

ಮತ್ತೂ ಪರಂತು, ಖಂಡ (ಸಿ) ರಡಿಯಲ್ಲಿನ ದೂರು ಯಾವುದೇ ಸಾರ್ವಜನಿಕ ನೌಕರನ ವಿರುದ್ಧವಾಗಿದ್ದಲ್ಲಿ, ನ್ಯಾಯಾಲಯವು ಸಂತ್ರಸ್ತ, ಮಾಹಿತಿದಾರ ಅಥವಾ ಸಾಕ್ಷಿಯ ವಿಷಯದಲ್ಲಿ, ಬಾಕಿ ಇರುವ ಪ್ರಕರಣಕ್ಕೆ ಸಂಬಂಧಿಸಿದ ಅಥವಾ ಸಂಬಂಧವಿಲ್ಲದ ಯಾವುದೇ ವಿಷಯದಲ್ಲಿ ಅಂಥ ಸಾರ್ವಜನಿಕ ನೌಕರನು ಹಸ್ತಕ್ಷೇಪ ಮಾಡದಂತೆ ನಿರ್ಬಂಧಿಸತಕ್ಕದ್ದು.

(7) ನ್ಯಾಯಾಲಯವು ಸಂತ್ರಸ್ತರಿಗೆ ಮತ್ತು ಸಾಕ್ಷಿಗಳಿಗೆ ನೀಡಲಾಗುತ್ತಿರುವ ರಕ್ಷಣೆಯನ್ನು ನಿಯತಕಾಲಿಕವಾಗಿ ಪರಿಶೀಲಿಸತಕ್ಕದ್ದು ಮತ್ತು ಅಗತ್ಯವಿದ್ದಲ್ಲಿ ಯಾವುದೇ ರಕ್ಷಣಾ ಕ್ರಮಗಳನ್ನು ಮಾರ್ಪಡಿಸಲು ಸೂಕ್ತ ಆದೇಶಗಳನ್ನು ಹೊರಡಿಸತಕ್ಕದ್ದು.

**17. ರಕ್ಷಣೆ ಮತ್ತು ಸುರಕ್ಷಿತ ವಾಸಸ್ಥಳಗಳನ್ನು ಒದಗಿಸುವ ಕರ್ತವ್ಯ.-** (1) ಸಂತ್ರಸ್ತರು, ಅವರ ಅವಲಂಬಿತರು ಮತ್ತು ಸಾಕ್ಷಿಗಳ ವಿರುದ್ಧ ಯಾವುದೇ ವಿಧದ ಬೆದರಿಕೆ ಅಥವಾ ಬಲವಂತ ಅಥವಾ ಪ್ರಲೋಭನೆ (inducement) ಅಥವಾ ಹಿಂಸೆ ಅಥವಾ ಹಿಂಸೆಯ ಬೆದರಿಕೆಗಳಿಗೆ ರಕ್ಷಣೆಯ ವ್ಯವಸ್ಥೆಗಳನ್ನು ಮಾಡುವುದು ಸರ್ಕಾರದ ಕರ್ತವ್ಯ ಮತ್ತು ಜವಾಬ್ದಾರಿಯಾಗಿರತಕ್ಕದ್ದು.

(2) ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳು ಉಪ ವಿಭಾಗೀಯ ಮ್ಯಾಜಿಸ್ಟ್ರೇಟ್ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟ್ ಅಥವಾ ಅಧಿಕಾರವ್ಯಾಪ್ತಿಯ ಪೊಲೀಸರಿಗೆ ಯಾರೇ ವ್ಯಕ್ತಿ ಅಥವಾ ನಡೆಯಬಹುದಾದ ಕಾನೂನುಬಾಹಿರ ಸಭೆಸೇರುವಿಕೆ ಅಥವಾ ಯಾವುದೇ ಮದುವೆಯನ್ನು ಆಕ್ಷೇಪಿಸುವುದರಿಂದ ರಕ್ಷಣೆಯನ್ನು ಕೋರಿ ದೂರುಗಳನ್ನು ನೀಡಬಹುದು, ಪ್ರಸ್ತಾವನೆಗಳನ್ನು ದಾಖಲಿಸಬಹುದು ಅಥವಾ ಪತ್ರಗಳನ್ನು ಬರೆಯಬಹುದು.

(3) ಅಂಥ ದೂರು ಅಥವಾ ಮನವಿಯನ್ನು ಸ್ವೀಕರಿಸಿದ ಮೇಲೆ ಉಪ ವಿಭಾಗೀಯ ಮ್ಯಾಜಿಸ್ಟ್ರೇಟ್ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟರು ಪೊಲೀಸರಿಗೆ ಅದಕ್ಕಾಗಿ ಸೂಕ್ತ ನಿರ್ದೇಶನಗಳನ್ನು ನೀಡುವುದನ್ನು ಒಳಗೊಂಡಂತೆ, ಸದರಿ ವ್ಯಕ್ತಿಗೆ ರಕ್ಷಣೆಯನ್ನು ಒದಗಿಸಲು ತಕ್ಷಣವೇ ಸೂಕ್ತ ಕ್ರಮಗಳನ್ನು ಕೈಗೊಳ್ಳತಕ್ಕದ್ದು. ಪೊಲೀಸರು ಅಂಥ ದೂರು ಅಥವಾ ರಕ್ಷಣೆಗಾಗಿ ಕೋರಿಕೆಯನ್ನು ಸ್ವೀರಿಸಿದಲ್ಲಿ, ತಕ್ಷಣವೇ ಮತ್ತು 6 ಗಂಟೆಗಳನ್ನು ಮೀರದಂತೆ, ಸದರಿ ವ್ಯಕ್ತಿಗಳಿಗೆ ತಾನು ಸೂಕ್ತವೆಂದು ಭಾವಿಸಬಹುದಾಂಥ ವಿಧಾನದಲ್ಲಿ ಅಥವಾ ಯಾವುದೇ ಇತರ ವಿಧಾನಗಳ ಮೂಲಕ, ಆದರೆ ಆಶ್ರಯದ ಮನೆ ಹುಡುಕುವುದಕ್ಕೆ ಸೀಮಿತಗೊಳಿಸದೇ, ರಕ್ಷಣೆ ಮತ್ತು ಸುರಕ್ಷತಾ ಕ್ರಮಗಳನ್ನು ಒದಗಿಸತಕ್ಕದ್ದು.

(4) ದಂಪತಿಗಳಿಗೆ ಆಶ್ರಯದ ಅಗತ್ಯವಿರುವ ಮತ್ತು ಉಳಿಯಲು ಸುರಕ್ಷಿತ ಸ್ಥಳಕ್ಕಾಗಿ ಮನೆಗಳನ್ನು ಒದಗಿಸುವುದು ರಾಜ್ಯ ಸರ್ಕಾರದ ಕರ್ತವ್ಯವಾಗಿರತಕ್ಕದ್ದು. ಅವರ ಖಾಸಗಿತನದ ಯುಕ್ತ ಜಾಗರೂಕತೆಯೊಂದಿಗೆ ಈ ಆಶ್ರಿತ ಮನೆಗಳು ಈ ದಂಪತಿಗಳ ರಕ್ಷಣೆಗಾಗಿ ಸಮರ್ಪಕ ಭದ್ರತೆಯನ್ನು ಒದಗಿಸತಕ್ಕದ್ದು. ಸುರಕ್ಷತಾ ವಾಸಸ್ಥಳಗಳಲ್ಲಿ, ದಂಪತಿಗಳು ಅವರ ವಕೀಲರು

ಅಥವಾ ಅವರಿಗೆ ಬೆಂಬಲ ಮತ್ತು ನೆರವು ನೀಡುವ ಯಾವುದೇ ಸರ್ಕಾರೇತರ ಸಂಸ್ಥೆಯ ಸದಸ್ಯರನ್ನು ಭೇಟಿಯಾಗುವ ಪ್ರವೇಶಾವಕಾಶ ಮತ್ತು ಸೌಲಭ್ಯಗಳನ್ನು ಹೊಂದಿರತಕ್ಕದ್ದು.

(5) ರಾಜ್ಯ ಸರ್ಕಾರವು, ಅಧಿನಿಯಮದ 3ನೇ ಪ್ರಕರಣದಡಿಯಲ್ಲಿನ ಹಕ್ಕುಗಳು, ಅಪಾಯದಲ್ಲಿರುವ ವ್ಯಕ್ತಿಗಳಿಗಾಗಿ ಪ್ರತಿ ಜಿಲ್ಲಾ ಕೇಂದ್ರದಲ್ಲಿ ಸುರಕ್ಷತಾ ವಾಸಸ್ಥಳಗಳನ್ನು ಸ್ಥಾಪಿಸತಕ್ಕದ್ದು.

(6) ಈ ಅಧಿನಿಯಮದಡಿ ಸಂತ್ರಸ್ತರು ಮತ್ತು ಸಾಕ್ಷಿಗಳ ರಕ್ಷಣೆ ಮತ್ತು ಪುನರ್ವಸತಿಗಾಗಿ ಸ್ಕೀಮುಗಳನ್ನು ರಚಿಸುವುದು ರಾಜ್ಯ ಸರ್ಕಾರದ ಕರ್ತವ್ಯವಾಗಿರತಕ್ಕದ್ದು ಮತ್ತು ಅಂಥ ಸ್ಕೀಮುಗಳು ತಕ್ಷಣದ ಪರಿಹಾರ ಉಪಬಂಧಗಳನ್ನು ಒಳಗೊಂಡಿರಬಹುದು.

**18. ಸಾರ್ವಜನಿಕ ನೌಕರನ ಕರ್ತವ್ಯ.-** (1) ಸಾರ್ವಜನಿಕ ನೌಕರನ ಕರ್ತವ್ಯಗಳು ಈ ಮುಂದಿನವುಗಳನ್ನು ಒಳಗೊಂಡಿರತಕ್ಕದ್ದು,-

(ಎ) ಈ ಅಧಿನಿಯಮದಡಿ ಯಾವುದೇ ಅಪರಾಧದ ಕುರಿತು ಯಾರೇ ವ್ಯಕ್ತಿ, ಮಾಹಿತಿದಾರ, ಸಂತ್ರಸ್ತ ಅಥವಾ ಸಾಕ್ಷಿಗಳು ಮೌಖಿಕವಾಗಿ ಅಥವಾ ಲಿಖಿತವಾಗಿ ನೀಡಲಾದ ಅಥವಾ ಯಾವುದೇ ವಿಧದ ಬೆದರಿಕೆ, ಬಲವಂತ ಅಥವಾ ಪ್ರಲೋಭನೆ ಅಥವಾ ಹಿಂಸೆ ಅಥವಾ ಹಿಂಸೆಯ ಬೆದರಿಕೆಗಳಿಗೆ ಸಂಬಂಧಿಸಿದ ದೂರನ್ನು ದಾಖಲಿಸತಕ್ಕದ್ದು;

(ಬಿ) ಮಾಹಿತಿದಾರನ ಸಹಿ ಪಡೆಯುವ ಮೊದಲು ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಯು, ಮೌಖಿಕವಾಗಿ ನೀಡಿದ ಮಾಹಿತಿಯನ್ನು ಲಿಖಿತದಲ್ಲಿ ಸಂಕ್ಷಿಪ್ತಗೊಳಿಸಿ ಮಾಹಿತಿದಾರನಿಗೆ ಓದಿ ಹೇಳತಕ್ಕದ್ದು;

(ಸಿ) ಈ ಅಧಿನಿಯಮ ಅಥವಾ ಇತರ ಸಂಬಂಧಿತ ಉಪಬಂಧಗಳಡಿ ದೂರನ್ನು ಅಥವಾ ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಿಕೊಳ್ಳತಕ್ಕದ್ದು;

(ಡಿ) ಹಾಗೆ ದಾಖಲಿಸಿದ ಮಾಹಿತಿಯ ಪ್ರತಿಯನ್ನು ಕೂಡಲೇ ಮಾಹಿತಿದಾರನಿಗೆ ಒದಗಿಸತಕ್ಕದ್ದು;

(ಇ) ಸಂತ್ರಸ್ತರ ಅಥವಾ ಸಾಕ್ಷಿಗಳ ಹೇಳಿಕೆಗಳನ್ನು ದಾಖಲಿಸತಕ್ಕದ್ದು;

(ಎಫ್) ತನಿಖೆಯನ್ನು ನಡೆಸತಕ್ಕದ್ದು ಮತ್ತು ದೋಷಾರೋಪಣಾ ಪಟ್ಟಿಯನ್ನು ವಿಶೇಷ ನ್ಯಾಯಾಲಯ ಅಥವಾ ಪ್ರತ್ಯೇಕ ವಿಶೇಷ ನ್ಯಾಯಾಲಯಕ್ಕೆ ಅರವತ್ತು ದಿನಗಳ ಅವಧಿಯೊಳಗೆ ದಾಖಲಿಸತಕ್ಕದ್ದು ಹಾಗೂ ಏನಾದರೂ ವಿಳಂಬವಾದಲ್ಲಿ ಲಿಖಿತದಲ್ಲಿ ವಿವರಣೆ ನೀಡತಕ್ಕದ್ದು;

(ಜಿ) ಯಾವುದೇ ದಸ್ತಾವೇಜನ್ನು ಅಥವಾ ವಿದ್ಯುನ್ಮಾನ ದಾಖಲೆಯನ್ನು ಸರಿಯಾಗಿ ಸಿದ್ಧಪಡಿಸತಕ್ಕದ್ದು, ನಿರೂಪಿಸತಕ್ಕದ್ದು ಮತ್ತು ಭಾಷಾಂತರಿಸತಕ್ಕದ್ದು;

(ಎಚ್) ಈ ಅಧಿನಿಯಮದಡಿ ಎಲ್ಲಾ ವ್ಯಕ್ತಿಗಳ ಹಕ್ಕುಗಳನ್ನು ಗೌರವಿಸತಕ್ಕದ್ದು ಹಾಗೂ ಯಾವುದೇ ಅಂಥ ಹಕ್ಕನ್ನು ದುರ್ಬಲಗೊಳಿಸಲಾಗಿದೆ ಎಂಬುದಕ್ಕಾಗಿ ಕ್ರಮ ಕೈಗೊಳ್ಳತಕ್ಕದ್ದಲ್ಲ;

(ಐ) ಈ ಅಧಿನಿಯಮ ಮತ್ತು ಅದರಡಿ ರಚಿಸಲಾದ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು,

(2) ಯಾರೇ ಸಾರ್ವಜನಿಕ ನೌಕರನು ಈ ಅಧಿನಿಯಮದಡಿ ಯಾರೇ ವ್ಯಕ್ತಿಯ ಹಕ್ಕುಗಳನ್ನು ಚಲಾಯಿಸುವ ಅವರ ಹಕ್ಕನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅಡ್ಡಿಪಡಿಸುವ, ನಿರ್ಬಂಧಿಸುವ, ಅಥವಾ ದುರ್ಬಲಗೊಳಿಸುವ ಯಾವುದೇ ಕೃತ್ಯದಲ್ಲಿ ತೊಡಗತಕ್ಕದ್ದಲ್ಲ.

**19. ಕೆಲವು ಕೃತ್ಯಗಳನ್ನು ನಿಷೇಧಿಸುವ ಮತ್ತು ಪ್ರತಿಬಂಧಕ ಕ್ರಮಗಳನ್ನು ತೆಗೆದುಕೊಳ್ಳುವ ಅಧಿಕಾರ.-** ಮರ್ಯಾದೆ ಅಥವಾ ಸಂಪ್ರದಾಯದ ಹೆಸರಿನಲ್ಲಿ ಯಾವುದೇ ನಿರ್ದಿಷ್ಟ ದಂಪತಿ ಅಥವಾ ವ್ಯಕ್ತಿಗಳ ವಿರುದ್ಧ ಮಾಡಬೇಕಾದ ಅಪರಾಧಗಳಿಗೆ ಸಂಬಂಧಿಸಿದಂತೆ ಯಾವುದೇ ಉದ್ದೇಶಿತ ಕಾನೂನುಬಾಹಿರ ಸಭೆಸೇರುವಿಕೆ ಅಥವಾ ಒಗ್ಗೂಡುವ ಬಗ್ಗೆ ಮಾಹಿತಿಯು, ಯಾವುದೇ ಪೊಲೀಸ್ ಅಧಿಕಾರಿ ಅಥವಾ ಜಿಲ್ಲಾಡಳಿತದ ಯಾವುದೇ ಅಧಿಕಾರಿಯ ಗಮನಕ್ಕೆ ಬಂದರೆ, ಅವರು:

(i) ತಕ್ಷಣವೇ ಅಧಿಕಾರವ್ಯಾಪ್ತಿಯುಳ್ಳ ಪೊಲೀಸ್ ಉಪ ವರಿಷ್ಠಾಧಿಕಾರಿ ಮತ್ತು ಪೊಲೀಸ್ ವರಿಷ್ಠಾಧಿಕಾರಿಗೆ ಮಾಹಿತಿಯನ್ನು ನೀಡತಕ್ಕದ್ದು.

(ii) ಜಿಲ್ಲಾ ಮ್ಯಾಜಿಸ್ಟ್ರೇಟರು, ಆ ಮೂಲಕ ನಿರ್ದಿಷ್ಟಪಡಿಸಿದ ಯಾವುದೇ ಪ್ರದೇಶದಲ್ಲಿ ಯಾರೇ ವ್ಯಕ್ತಿಯು ಈ ಅಧಿನಿಯಮದಡಿ ಕಾನೂನುಬಾಹಿರವಾಗಿ ಅಂಥ ಸಭೆಸೇರಲು ಕರೆಯುವುದನ್ನು ಮತ್ತು ಯಾವುದೇ ಅಪರಾಧ ಎಸಗುವ ನಿಟ್ಟಿನಲ್ಲಿ ಯಾವುದೇ ಕೃತ್ಯ ಎಸಗುವುದನ್ನು ನಿಷೇಧಿಸುವ ಆದೇಶವನ್ನು ತಕ್ಷಣವೇ ಹೊರಡಿಸತಕ್ಕದ್ದು ಹಾಗೂ ಅಂಥ ಆದೇಶವನ್ನು ತಕ್ಷಣವೇ ಸ್ಥಳೀಯ ಪತ್ರಿಕೆಯಲ್ಲಿ ಪ್ರಕಟಿಸತಕ್ಕದ್ದು ಮತ್ತು ಸದರಿ ಕಾನೂನುಬಾಹಿರವಾಗಿ ಸಭೆಸೇರುವ ಅಂಥ ವ್ಯಕ್ತಿಗಳಿಗೆ ತಲುಪಿಸತಕ್ಕದ್ದು;

(iii) ಉಪ-ವಿಭಾಗೀಯ ಮ್ಯಾಜಿಸ್ಟ್ರೇಟ್ ಅಥವಾ ಜಿಲ್ಲಾ ಮ್ಯಾಜಿಸ್ಟ್ರೇಟರು, ಸಂಬಂಧಿತ ಪೊಲೀಸ್ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವುದನ್ನೂ ಒಳಗೊಂಡಂತೆ ಅಂಥ ಆದೇಶವನ್ನು ಜಾರಿಗೆ ತರಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಬಹುದು.

(iv) ಜಿಲ್ಲಾ ಮ್ಯಾಜಿಸ್ಟ್ರೇಟರು, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 46)ರ ಅಡಿಯಲ್ಲಿ ಪ್ರತಿಬಂಧಕ ಮತ್ತು ನಿಷೇಧಾತ್ಮಕ ಕ್ರಮಗಳನ್ನು ಒಳಗೊಂಡಂತೆ ಕಾನೂನುಬಾಹಿರವಾಗಿ ಸಭೆಸೇರುವ ಮೂಲಕ ಕೈಗೊಂಡ ಕಾನೂನುವಿರೋಧಿ ನಿರ್ಧಾರಗಳಿಗೆ ಅನುಸಾರವಾಗಿ ಗುರಿಯಾದ ವ್ಯಕ್ತಿಗಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಅಗತ್ಯವಾಗಬಹುದಾದಂಥ ಕ್ರಮಗಳನ್ನು ಸಹ ಕೈಗೊಳ್ಳತಕ್ಕದ್ದು.

(v) ಜಿಲ್ಲಾ ಮ್ಯಾಜಿಸ್ಟ್ರೇಟ್/ ಪೊಲೀಸ್ ವರಿಷ್ಠಾಧಿಕಾರಿಯು, ಅಂಥ ದಂಪತಿ/ಕುಟುಂಬಕ್ಕೆ ನೀಡಲಾಗುವ ಬೆದರಿಕೆಗೆ ಸಂಬಂಧಿಸಿದ ದೂರನ್ನು ಅತ್ಯಂತ ಸೂಕ್ಷ್ಮತೆಯಿಂದ ನಿರ್ವಹಿಸತಕ್ಕದ್ದು. ಅಗತ್ಯವಿದ್ದರೆ, ಅವರ ಮದುವೆಯನ್ನು ವಿಧಿವತ್ತಾಗಿ ನೆರವೇರಿಸಲು ಮತ್ತು/ಅಥವಾ ಅವರು ಬಯಸಿದರೆ, ದಂಪತಿಗಳು ಇಚ್ಛಿಸಿದಲ್ಲಿ, ಪೊಲೀಸ್ ರಕ್ಷಣೆಯ ಅಡಿಯಲ್ಲಿ ಯುಕ್ತವಾಗಿ ವಿವಾಹ ನೋಂದಾಯಿಸಲು ಅವರಿಗೆ ವ್ಯವಸ್ಥಾಪನಾ ಬೆಂಬಲವನ್ನು ಒದಗಿಸಬಹುದು. ಮದುವೆಯ ನಂತರ, ದಂಪತಿಗಳು ಹಾಗೆ ಇಚ್ಛಿಸಿದಲ್ಲಿ, ಆರಂಭದಲ್ಲಿ ಒಂದು ತಿಂಗಳ ಅವಧಿಗಾಗಿ ಮಾಸಿಕ ಆಧಾರದ ಮೇಲೆ ವಿಸ್ತರಿಸಬಹುದಾದ ಆದರೆ ಒಟ್ಟಾರೆಯಾಗಿ ಒಂದು ವರ್ಷವನ್ನು ಮೀರದಂತೆ, ಸುರಕ್ಷತಾ ಸ್ಥಳನಿವಾಸದಲ್ಲಿ ನಾಮಮಾತ್ರದ ಶುಲ್ಕ ಪಾವತಿಯ ಮೇರೆಗೆ, ಪ್ರಕರಣದಿಂದ ಪ್ರಕರಣದ ಆಧಾರದಲ್ಲಿ ಅವರ ಬೆದರಿಕೆ ಪ್ರಮಾಣವನ್ನು ಅವಲಂಬಿಸಿ, ವಸತಿಯನ್ನು ಒದಗಿಸಬಹುದು.

**20. ಅಧಿನಿಯಮದಡಿ ಕರ್ತವ್ಯವನ್ನು ನಿರ್ವಹಿಸಲು ವಿಫಲವಾಗುವಿಕೆ.-** ಯಾರೇ ಸಾರ್ವಜನಿಕ ನೌಕರನು, ಈ ಅಧಿನಿಯಮ ಮತ್ತು ಅದರಡಿಯಲ್ಲಿ ರಚಿಸಲಾದ ನಿಯಮಗಳ

ಮೇರೆಗೆ, ಆತನು ನಿರ್ವಹಿಸಬೇಕಾದ ಕರ್ತವ್ಯಗಳನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಿದರೆ, ಆತನು ಇಲಾಖಾ ವ್ಯವಹರಣೆಗಳಿಗೆ ಹೊಣೆಗಾರನಾಗಿರತಕ್ಕದ್ದು.

**21. ಕಡ್ಡಾಯವಾಗಿ ವರದಿ ಮಾಡುವುದು.-** (1) ಎಲ್ಲಾ ರಾಜ್ಯ ಸರ್ಕಾರಿ ಅಧಿಕಾರಿಗಳು ಈ ಅಧಿನಿಯಮ ಅಥವಾ ಅದರಡಿಯಲ್ಲಿ ರಚಿಸಲಾದ ಯಾವುದೇ ನಿಯಮ ಅಥವಾ ಆದೇಶದ ಉಪಬಂಧಗಳನ್ನು ಕಾರ್ಯಗತಗೊಳಿಸುವಲ್ಲಿ ಪೊಲೀಸರಿಗೆ ನೆರವುನೀಡುವುದನ್ನು ಅಗತ್ಯಪಡಿಸಲಾಗಿದೆ ಮತ್ತು ಅಧಿಕಾರವನ್ನು ನೀಡಲಾಗಿದೆ.

(2) ಯಾವುದೇ ಪ್ರದೇಶದ ಸಂಬಂಧದಲ್ಲಿ ಜಿಲ್ಲಾಧಿಕಾರಿಯು ನಿರ್ದಿಷ್ಟಪಡಿಸಬಹುದಾದ ಎಲ್ಲಾ ಗ್ರಾಮ ಅಧಿಕಾರಿಗಳು ಮತ್ತು ಅಂಥ ಇತರ ಅಧಿಕಾರಿಗಳು ಹಾಗೂ ಅಂಥ ಪ್ರದೇಶದ ನಿವಾಸಿಗಳು, ಈ ಅಧಿನಿಯಮದ ಅಡಿಯಲ್ಲಿ ಉಲ್ಲೇಖಿಸಲಾದ ಯಾವುದೇ ಅಪರಾಧಗಳನ್ನು ಆ ಪ್ರದೇಶದಲ್ಲಿ ಎಸಗಲಾಗಿದೆ ಅಥವಾ ಎಸಗಬಹುದಾಗಿದೆ ಎಂದು ನಂಬಲು ಅಥವಾ ತಿಳಿಯಲು ಕಾರಣವಿದ್ದರೆ, ಕೂಡಲೇ ಅಂಥ ಸಂಗತಿಯನ್ನು ಹತ್ತಿರದ ಪೊಲೀಸ್ ಠಾಣೆಗೆ ಕಡ್ಡಾಯವಾಗಿ ವರದಿ ಮಾಡತಕ್ಕದ್ದು.

(3) ಯಾರಾದರೂ ಉಪಪ್ರಕರಣ (1) ಅಥವಾ ಉಪಪ್ರಕರಣ (2)ರ ಉಪಬಂಧಗಳನ್ನು ಉಲ್ಲಂಘಿಸಿದರೆ, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದೊಂದಿಗೆ ದಂಡಿತನಾಗತಕ್ಕದ್ದು ಮತ್ತು ಎರಡರಲ್ಲೊಂದಾದ ಜುಲ್ಮಾನೆಗೂ ಸಹ ಹೊಣೆಗಾರನಾಗತಕ್ಕದ್ದು.

**22. ಅಧಿನಿಯಮದ ಪರಿಣಾಮಕಾರಿ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳುವ ರಾಜ್ಯ ಸರ್ಕಾರದ ಕರ್ತವ್ಯಗಳು.-** (1) ರಾಜ್ಯ ಸರ್ಕಾರವು, ಕಳೆದ ಐದು ವರ್ಷಗಳಲ್ಲಿ ಮರ್ಯಾದೆ ಅಥವಾ ಸಂಪ್ರದಾಯದ ಹೆಸರಿನಲ್ಲಿ ಅಪರಾಧ ಘಟನೆಗಳು ವರದಿಯಾಗಿರುವ ಜಿಲ್ಲೆಗಳು, ಉಪವಿಭಾಗಗಳು ಮತ್ತು/ಅಥವಾ ಗ್ರಾಮಗಳನ್ನು ಕೂಡಲೇ ಗುರುತಿಸತಕ್ಕದ್ದು.

(2) ಕಾನೂನು, ನ್ಯಾಯ, ಮಾನವ ಹಕ್ಕುಗಳ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ತಮ್ಮ ಅಧಿಕಾರವ್ಯಾಪ್ತಿಯೊಳಗೆ ಯಾವುದೇ ಅಂತರ್ಜಾತಿ ವಿವಾಹದ ಘಟನೆಗಳು ಗಮನಕ್ಕೆ ಬಂದರೆ, ಗುರುತಿಸಲಾದ ಪ್ರದೇಶಗಳ ಪೊಲೀಸ್ ಠಾಣೆಗಳ ಉಸ್ತುವಾರಿ ಅಧಿಕಾರಿಗಳು ಹೆಚ್ಚು ಜಾಗರೂಕರಾಗಿರುವುದನ್ನು ಖಚಿತಪಡಿಸಿಕೊಳ್ಳಲು ಸಂಬಂಧಿಸಿದ ಜಿಲ್ಲೆಗಳ ಪೊಲೀಸ್ ವರಿಷ್ಠಾಧಿಕಾರಿಗೆ ನಿರ್ದೇಶನಗಳು/ಸಲಹೆಗಳನ್ನು ನೀಡತಕ್ಕದ್ದು.

(3) ಕಾನೂನು, ನ್ಯಾಯ, ಮಾನವ ಹಕ್ಕುಗಳ ಇಲಾಖೆಯು, ಮರ್ಯಾದೆಯ ಹೆಸರಿನಲ್ಲಿನ ಅಪರಾಧಗಳನ್ನು ತಡೆಗಟ್ಟುವುದಕ್ಕಾಗಿ ಕ್ರಮಗಳನ್ನು ಗುರುತಿಸಲು ಮತ್ತು ಈ ಶಾಸನವನ್ನು ಅನುಷ್ಠಾನಗೊಳಿಸಲು ಎಲ್ಲಾ ಪಾಲುದಾರರನ್ನು ತೊಡಗಿಸಿಕೊಳ್ಳುವ ಮೂಲಕ ಕಾನೂನು ಜಾರಿ ಏಜೆನ್ಸಿಗಳು, ಸರ್ಕಾರಿ ಇಲಾಖೆಗಳು ಮತ್ತು ಪೊಲೀಸರಿಗೆ ಜಾಗೃತಿ ಮೂಡಿಸಲು ಮತ್ತು ಸಂವೇದನಾಶೀಲಗೊಳಿಸಲು ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(4) ಸರ್ಕಾರವು ಅಂತರ್ಜಾತಿ ವಿವಾಹವಾದ ದಂಪತಿಗಳಿಗೆ ಮತ್ತು 3ನೇ ಪ್ರಕರಣದ ಅಡಿಯಲ್ಲಿ ತಮ್ಮ ಹಕ್ಕನ್ನು ಚಲಾಯಿಸುವ ಯಾರೇ ವ್ಯಕ್ತಿಗೆ ಕಿರುಕುಳ ಹಾಗೂ ಬೆದರಿಕೆಯ ಅರ್ಜಿಗಳು/ದೂರುಗಳನ್ನು ಸ್ವೀಕರಿಸಲು, ಪ್ರತಿ ಜಿಲ್ಲೆಯಲ್ಲೂ ಪೊಲೀಸ್ ವರಿಷ್ಠಾಧಿಕಾರಿ, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳನ್ನು ಒಳಗೊಂಡ 'ಮರ್ಯಾದೆ' ಅಥವಾ

'ಸಂಪ್ರದಾಯ'ದ ಹೆಸರಿನಲ್ಲಿನ ಅಪರಾಧಗಳನ್ನು ತಡೆಗಟ್ಟುವುದಕ್ಕಾಗಿ ವಿಶೇಷ ಕೋಶವನ್ನು ಸೃಜಿಸತಕ್ಕದ್ದು.

(5) ಈ ವಿಶೇಷ ಕೋಶಗಳು ಅಂಥ ದೂರುಗಳನ್ನು ಸ್ವೀಕರಿಸಲು ಮತ್ತು ನೋಂದಾಯಿಸಲು ಹಾಗೂ ದಂಪತಿಗಳಿಗೆ ಅಗತ್ಯ ನೆರವು/ಸಲಹೆ ಮತ್ತು ರಕ್ಷಣೆಯನ್ನು ಒದಗಿಸಲು 24 ಗಂಟೆಗಳ ಸಹಾಯವಾಣಿಯನ್ನು ಸ್ಥಾಪಿಸತಕ್ಕದ್ದು.

**23. ಮೇಲ್ವಿಚಾರಣಾ ಸಮಿತಿಗಳ ರಚನೆ -** (1) ಪ್ರತಿ ಜಿಲ್ಲೆಯಲ್ಲೂ, ಜಿಲ್ಲಾ ಮ್ಯಾಜಿಸ್ಟ್ರೇಟರು ಅಧಿನಿಯಮದ ಉಪಬಂಧಗಳ ಅನುಷ್ಠಾನ, ಸಂತ್ರಸ್ತರಿಗೆ ಒದಗಿಸಲಾದ ಪರಿಹಾರ ಮತ್ತು ಪುನರ್ವಸತಿ ಸೌಲಭ್ಯಗಳು ಹಾಗೂ ಅದಕ್ಕೆ ಸಂಬಂಧಿಸಿದ ಇತರ ವಿಷಯಗಳನ್ನು, ಅಧಿನಿಯಮದಡಿಯಲ್ಲಿನ ಪ್ರಕರಣಗಳ ಅಭಿಯೋಜನೆ, ಅಧಿನಿಯಮದ ಉಪಬಂಧಗಳ ಅನುಷ್ಠಾನಕ್ಕಾಗಿ ಜವಾಬ್ದಾರರಾಗಿರುವ ವಿವಿಧ ಅಧಿಕಾರಿಗಳು/ಏಜೆನ್ಸಿಗಳ ಪಾತ್ರ ಮತ್ತು ಜಿಲ್ಲಾಡಳಿತವು ಸ್ವೀಕರಿಸುವ ವಿವಿಧ ವರದಿಗಳನ್ನು ಪುನರಾವಲೋಕಿಸಲು ಮೇಲ್ವಿಚಾರಣಾ ಸಮಿತಿಯನ್ನು ರಚಿಸತಕ್ಕದ್ದು.

(2) ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಮಿತಿಯು ಪೊಲೀಸ್ ವರಿಷ್ಠಾಧಿಕಾರಿ, ರಾಜ್ಯ ಸರ್ಕಾರದ ಮೂವರು ಗ್ರೂಪ್ 'ಎ' ಅಧಿಕಾರಿಗಳು/ಗೆಜೆಟೆಡ್ ಅಧಿಕಾರಿಗಳು ಮತ್ತು ಸರ್ಕಾರೇತರ ಸಂಸ್ಥೆಗಳೊಂದಿಗೆ ಸಹಯೋಗ ಹೊಂದಿರುವ ಮೂವರು ಸದಸ್ಯರನ್ನು ಒಳಗೊಂಡಿರತಕ್ಕದ್ದು.

(3) ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಮಿತಿಯು ಕನಿಷ್ಠ ಮೂರು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು.

(4) ರಾಜ್ಯ ಸರ್ಕಾರವು ಈ ಅಧಿನಿಯಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು. ಅಂಥ ಕ್ರಮಗಳು ಈ ಮುಂದಿನವುಗಳನ್ನು ಒಳಗೊಂಡಿರಬಹುದು,-

(i) ಮರ್ಯಾದೆಗೇಡು ಅಪರಾಧಗಳಿಗೆ ಒಳಗಾದ ವ್ಯಕ್ತಿಗಳು ತಾವೇ ಸ್ವತಃ ನ್ಯಾಯವನ್ನು ಪಡೆಯಲು ಅನುಕೂಲವಾಗುವಂತೆ, ಕಾನೂನು ನೆರವನ್ನು ಒಳಗೊಂಡ ಸಮರ್ಪಕ ಸೌಲಭ್ಯಗಳಿಗಾಗಿನ ಉಪಬಂಧ;

(ii) ಈ ಅಧಿನಿಯಮದ ಉಪಬಂಧಗಳ ಉತ್ತಮ ಅನುಷ್ಠಾನಕ್ಕಾಗಿ ಕ್ರಮಗಳನ್ನು ಸೂಚಿಸುವ ದೃಷ್ಟಿಯಿಂದ ಈ ಅಧಿನಿಯಮದ ಉಪಬಂಧಗಳ ಕಾರ್ಯವೈಖರಿಯ ನಿಯತಕಾಲಿಕ ಸಮೀಕ್ಷೆಗಾಗಿನ ಉಪಬಂಧ,

**24. ಇವ ನಮ್ಮವ ವೇದಿಕೆ-** (1) ಪ್ರತಿ ಜಿಲ್ಲೆಯಲ್ಲೂ, ಜಿಲ್ಲಾ ಮ್ಯಾಜಿಸ್ಟ್ರೇಟರು "ಇವ ನಮ್ಮವ ವೇದಿಕೆ" ಯನ್ನು ರಚಿಸತಕ್ಕದ್ದು.

(2) ಇವ ನಮ್ಮವ ವೇದಿಕೆಯು ನಿವೃತ್ತ ನ್ಯಾಯಾಧೀಶರು, ಪೊಲೀಸ್ ಅಧಿಕಾರಿ, ಕಂದಾಯ ಅಧಿಕಾರಿ, ಉಪ-ನೋಂದಣಾಧಿಕಾರಿ ಮತ್ತು ನಿಯಮಿಸಬಹುದಾದಂಥ ಇತರ ಸದಸ್ಯರನ್ನು ಒಳಗೊಂಡಿರತಕ್ಕದ್ದು.

(3) ಇವ ನಮ್ಮವ ವೇದಿಕೆಯು, ಮದುವೆಯ ವಿಧಿವಿಧಾನಕ್ಕೆ ಅನುಕೂಲ ಕಲ್ಪಿಸಿಕೊಡತಕ್ಕದ್ದು, ಸಮಾಲೋಚನಾ ಸೇವೆಗಳನ್ನು ಒದಗಿಸತಕ್ಕದ್ದು ಮತ್ತು ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

**25. ವಿಶೇಷ ತ್ವರಿತ ನ್ಯಾಯಾಲಯಗಳ ಸ್ಥಾಪನೆ.-** (1) ರಾಜ್ಯ ಸರ್ಕಾರವು, ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿದ ತರುವಾಯ, ಅಧಿಸೂಚನೆಯ ಮೂಲಕ, ಈ ಅಧಿನಿಯಮದಡಿ ಮರ್ಯಾದೆ ಹೆಸರಿನಲ್ಲಿನ ಅಪರಾಧಗಳು ಮತ್ತು ದುಷ್ಕೃತ್ಯಗಳಿಗೆ ಸಂಬಂಧಿಸಿದ ಪ್ರಕರಣಗಳ ಅಧಿವಿಚಾರಣೆ ಮಾಡುವ ಉದ್ದೇಶಕ್ಕಾಗಿ ಜಿಲ್ಲಾ ನ್ಯಾಯಾಲಯಗಳನ್ನು ವಿಶೇಷ ತ್ವರಿತ ನ್ಯಾಯಾಲಯಗಳೆಂದು ಗೊತ್ತುಪಡಿಸಬಹುದು.

(2) ಅಂಥ ವಿಶೇಷ ತ್ವರಿತ ನ್ಯಾಯಾಲಯವು ಈ ಅಧಿನಿಯಮದಡಿಯಲ್ಲಿನ ಯಾವುದೇ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಡಿ ಜಿಲ್ಲಾ ನ್ಯಾಯಾಲಯವು ಚಲಾಯಿಸಬಹುದಾದ ಎಲ್ಲಾ ಅಧಿಕಾರವ್ಯಾಪ್ತಿಯನ್ನು ಚಲಾಯಿಸತಕ್ಕದ್ದು:

ಪರಂತು ಹಾಗೆ ಸ್ಥಾಪಿಸಲಾದ ಅಥವಾ ನಿರ್ದಿಷ್ಟಪಡಿಸಲಾದ ನ್ಯಾಯಾಲಯಗಳು ಈ ಅಧಿನಿಯಮದಡಿಯಲ್ಲಿನ ಅಪರಾಧಗಳ ಸಂಜ್ಞೇಯತೆಯನ್ನು ನೇರವಾಗಿ ತೆಗೆದುಕೊಳ್ಳುವ ಅಧಿಕಾರವನ್ನು ಹೊಂದಿರತಕ್ಕದ್ದು.

(3) ಈ ಅಧಿನಿಯಮದಡಿಯಲ್ಲಿನ ಪ್ರಕರಣಗಳನ್ನು ಸಾಧ್ಯವಾದಷ್ಟು ಎರಡು ತಿಂಗಳ ಅವಧಿಯೊಳಗೆ ಇತ್ಯರ್ಥಪಡಿಸುವುದನ್ನು ಖಚಿತಪಡಿಸಿಕೊಳ್ಳಲು ಸಾಕಷ್ಟು ಸಂಖ್ಯೆಯ ನ್ಯಾಯಾಲಯಗಳನ್ನು ಸ್ಥಾಪಿಸುವುದು ರಾಜ್ಯ ಸರ್ಕಾರದ ಕರ್ತವ್ಯವಾಗಿರತಕ್ಕದ್ದು.

(4) ಗೊತ್ತುಪಡಿಸಿದ ವಿಶೇಷ ತ್ವರಿತ ನ್ಯಾಯಾಲಯದ ಪೀಠಾಸೀನರಾದ ಸಂಬಂಧಪಟ್ಟ ಜಿಲ್ಲಾ ನ್ಯಾಯಾಧೀಶರು, ನಿಯಮಿಸಬಹುದಾದಂಥ ವಿಧಾನದಲ್ಲಿ ಈ ಅಧಿನಿಯಮದ ಬಗ್ಗೆ ಪೂರ್ವಭಾವಿ ತರಬೇತಿಯನ್ನು ಪಡೆಯತಕ್ಕದ್ದು.

(5) ವಿಶೇಷ ನ್ಯಾಯಾಲಯದಲ್ಲಿ ನಡೆಯುವ ಪ್ರತಿಯೊಂದು ಅಧಿವಿಚಾರಣೆಯಲ್ಲಿ, ಹಾಜರಿರುವ ಎಲ್ಲಾ ಸಾಕ್ಷಿದಾರರ ವಿಚಾರಣೆಯು ಮುಕ್ತಾಯವಾಗುವವರೆಗೆ ದೈನಂದಿನ ಆಧಾರದ ಮೇಲೆ ವ್ಯವಹರಣೆಗಳನ್ನು ಮುಂದುವರಿಸತಕ್ಕದ್ದು, ಮರುದಿನಕ್ಕಿಂತ ಮುಂದಕ್ಕೆ ವಿಚಾರಣೆಯನ್ನು ಮುಂದೂಡುವುದು ಅಗತ್ಯವೆಂದು ವಿಶೇಷ ನ್ಯಾಯಾಲಯಕ್ಕೆ ಕಂಡುಬಂದ ಹೊರತು, ಅದಕ್ಕೆ ಸಂಬಂಧಿಸಿದ ಕಾರಣಗಳನ್ನು ಲಿಖಿತವಾಗಿ ದಾಖಲಿಸಿ ಮುಂದೂಡತಕ್ಕದ್ದು:

ಪರಂತು, ಅಧಿವಿಚಾರಣೆಯು, ಈ ಅಧಿನಿಯಮದಡಿಯಲ್ಲಿನ ಅಪರಾಧಕ್ಕೆ ಸಂಬಂಧಿಸಿದ್ದಾಗ, ಆರೋಪಪಟ್ಟಿಯನ್ನು ಸಲ್ಲಿಸಿದ ದಿನಾಂಕದಿಂದ ಎರಡು ತಿಂಗಳ ಅವಧಿಯೊಳಗೆ ಸಾಧ್ಯವಾದಷ್ಟು ಮಟ್ಟಿಗೆ ವಿಚಾರಣೆಯನ್ನು ಪೂರ್ಣಗೊಳಿಸತಕ್ಕದ್ದು.

**26. ಅಪೀಲುಗಳು.-** (1) ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 46) ಅಥವಾ ಯಾವುದೇ ಇತರ ಕಾನೂನಿನ ಉಪಬಂಧಗಳಿಗೆ ಬಾಧಕವಾಗದಂತೆ,

ಈ ಅಧಿನಿಯಮದಡಿಯಲ್ಲಿನ ಪ್ರತಿಯೊಂದು ತೀರ್ಪು ಅಥವಾ ಆದೇಶದ ವಿರುದ್ಧ ಉಚ್ಚ ನ್ಯಾಯಾಲಯಕ್ಕೆ ಅಪೀಲನ್ನು ಸಲ್ಲಿಸತಕ್ಕದ್ದು.

(2) ಈ ಪ್ರಕರಣದಡಿಯಲ್ಲಿನ ಪ್ರತಿಯೊಂದು ಅಪೀಲನ್ನು, ಈ ಅಧಿನಿಯಮದಡಿ ತೀರ್ಪು ಅಥವಾ ಆದೇಶದ ದಿನಾಂಕದಿಂದ ತೊಂಬತ್ತು ದಿನಗಳ ಅವಧಿಯೊಳಗಾಗಿ ಸಲ್ಲಿಸತಕ್ಕದ್ದು:

ಪರಂತು ತೊಂಬತ್ತು ದಿನಗಳ ಅವಧಿಯೊಳಗೆ ಅಪೀಲನ್ನು ಸಲ್ಲಿಸದೇ ಇರಲು ಅರ್ಜಿದಾರನಿಗೆ ಸಾಕಷ್ಟು ಕಾರಣವಿದೆ ಎಂಬುದು ಉಚ್ಚ ನ್ಯಾಯಾಲಯಕ್ಕೆ ಮನದಟ್ಟಾದರೆ, ಸದರಿ ತೊಂಬತ್ತು ದಿನಗಳ ಅವಧಿಯು ಮುಕ್ತಾಯವಾದ ತರುವಾಯವೂ ಅಪೀಲನ್ನು ಸ್ವೀಕರಿಸಬಹುದು:

(3) ಉಪಪ್ರಕರಣ (1)ರ ಅಡಿಯಲ್ಲಿ ಸಲ್ಲಿಸಲಾದ ಪ್ರತಿಯೊಂದು ಅಪೀಲನ್ನು, ಸಾಧ್ಯವಾದಷ್ಟು ಮಟ್ಟಿಗೆ, ಅಪೀಲನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗಾಗಿ ವಿಲೇವಾರಿ ಮಾಡತಕ್ಕದ್ದು.

**27. ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023ರ ಅನ್ವಯ-** ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023 (2023ರ ಕೇಂದ್ರ ಅಧಿನಿಯಮ 46)ರ ಉಪಬಂಧಗಳು ಈ ಅಧಿನಿಯಮದಡಿಯಲ್ಲಿನ ವ್ಯವಹರಣೆಗಳಿಗೆ ಅನ್ವಯವಾಗತಕ್ಕದ್ದು.

**28. ಅಧಿನಿಯಮವು ಇತರ ಕಾನೂನುಗಳಿಗೆ ಹೆಚ್ಚುವರಿಯಾಗಿರತಕ್ಕದ್ದು.-** ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ಈ ಅಧಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳಿಗೆ ಹೆಚ್ಚುವರಿಯಾಗಿರತಕ್ಕದ್ದು ಮತ್ತು ಅಲ್ಪೀಕರಿಸತಕ್ಕದ್ದಲ್ಲ.

**29. ನಿಯಮಗಳ ರಚನಾಧಿಕಾರ.-** (1) ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ, ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಪೂರ್ವ ಪ್ರಕಟಿತ ಅಧಿಸೂಚನೆಯ ಮೂಲಕ, ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮ, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚಿನ ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನಗಳ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮೊದಲು ಆ ನಿಯಮ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಉಭಯ ಸದನಗಳೂ ಒಪ್ಪಿದರೆ ಅಥವಾ ಆ ನಿಯಮ ಅಥವಾ ಅಧಿಸೂಚನೆಯ ಮಾಡಕೂಡದೆಂದು ಉಭಯ ಸದನಗಳೂ ಒಪ್ಪಿದರೆ, ಆ ನಿಯಮ ಅಥವಾ ಅಧಿಸೂಚನೆಯ ಆ ಮಾರ್ಪಾಟನ್ನು ಅಥವಾ ರದ್ದತಿಯನ್ನು ಅಧಿಸೂಚಿಸಿದ ದಿನಾಂಕದಿಂದ ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಸಂದರ್ಭಾನುಸಾರವಾಗಿ ಯಾವುದೇ

ಪರಿಣಾಮ ಹೊಂದಿರತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಆ ನಿಯಮ ಅಥವಾ ಅಧಿಸೂಚನೆಯ ಅಡಿಯಲ್ಲಿ ಹಿಂದೆ ಮಾಡಿದ ಯಾವುದೇ ಕೃತ್ಯದ ಮಾನ್ಯತೆಗೆ ಬಾಧಕವಾಗತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ